ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಶರಣ ಮೇಳ

1991, ಜನವರಿ 13, 14, 15 ರಂದು



ಆಹ್ವಾನ ಪತ್ರಿಕೆ

॥ ಓಂ ಶ್ರೀಗುರುಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಬಸವ ಕ್ರಾಂತಿ ದಿನದ ಅಂಗವಾಗಿ

1991 ನೆ ಜನವರಿ 13, 14 ಮತ್ತು 15 ರಂದು

ನಡೆಯಲಿರುವ ಚಾರಿತ್ರಿಕ, ನಾಲ್ಕನೆಯ

ಶರಣ ಮೇಳ

ದಿ 13-1-1991 ರಂದು ಬೆಳಿಗ್ಗೆ 9.45ಕ್ಕೆ ಧ್ವಜಾರೋಹಣದ

ಸನ್ನಿವೇಶದಲ್ಲಿ ಹಾಡಲಾಗುವ ಗೀತೆ.

ಧ್ವಜಗೀತೆ

ಹೇ ಶರಣ ಬಂಧುಗಳೇ, ಬಸವ ಧ್ವಜವು ಹಾರುತಿದೆ
ಕ್ರಾಂತಿ ಕಹಳೆ ಮೊಳಗುತಿದೆ ! ಬನ್ನಿ ಬನ್ನಿ ಬನ್ನಿರೆಲ್ಲ ಭೇದಭಾವ ತೊಡೆದೀಗ॥
ಜಾತಿಯತೆಯ ತಿಮಿರ ತೊಡೆದು ಧಾರ್ಮಿಕತೆಯ ತತ್ತ್ವ ಹಿಡಿದು
ಸಮತಾ ಪತಾಕೆಯ ಬಸವ ತತ್ತ್ವದೊಡನೆ ಮೆರೆಸುತ ॥
ಧರ್ಮವೆಮದು ಸದ್ಧರ್ಮ ಧರ್ಮವೆಮದು ಮಾನವಧರ್ಮ
ಧರ್ಮವೆಮದು ರಾಷ್ಟ್ರಧರ್ಮ ಧರ್ಮವೆಮದು ವಿಶ್ವಧರ್ಮ ॥೧॥

ಬಸವಾದಿ ಪ್ರಮಥರ ದಿವ್ಯ ಪರಂಪರೆಯವರು
ಮನುಕುಲದ ಸ್ವಾತಂತ್ರ್ಯಕೆ ದುಡಿವೆವೆಂಬ ಛಲದವರು ॥
ಎಮ್ಮ ಬಾಳ ಕಣಕಣವು ಬಸವ ಪಾದಕರ್ಪಣ
ಎಮ್ಮ ಚೆನ್ನ ತನುಮನವು ನಾಡಗುಡಿಗೆ ತರ್ಪಣ ॥೨॥


ಜಾತಿಮತ ಪಂಥಗಳ ಕೀಳು ಭಾವ ಅಳಿಸುವಾ
ಭಿನ್ನಭೇದ ಮರೆತು ಬಾಳ್ವ ಪ್ರೇಮಭಾವ ಬೆಳೆಸುವಾ ॥
ಶಾಂತಿ ಸ್ನೇಹ ಪ್ರೇಮ ಸಮತೆ ಅಂಗವಿಸಿ ಬಾಳುವಾ
ಬಸವ ಧರ್ಮ ಪ್ರಣತೆಯುರಿಗೆ ಬಾಳ ತೈಲವೆರೆಯುವಾ ॥೩॥

ರಚನೆ : **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.**

ವಿ. ಸೂ : ಶರಣ ಮೇಳಕ್ಕೆ ಬರುವವರು ಆಹ್ವಾನ ಪತ್ರಿಕೆ ಸಹಿತ ಇರುವ ಈ ಪ್ರತಿಯನ್ನು ಜೊತೆಗೆ ತನ್ನಿರಿ.

ಕಲ್ಯಾಣ ಕಿರಣ

ಸಂಪುಟ : 19 ಸಂಚಿಕೆ : 8 ಡಿಸೆಂಬರ್, 1990 ಬಸವ ಶಕೆ : 885



॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವ ಕ್ರಾಂತಿ ದಿನದ ಅಂಗವಾಗಿ

ಕೂಡಲ ಸಂಗಮ ಸುಕ್ಷೇತ್ರದಲ್ಲಿ

1991 ನೆಯ ಜನವರಿ

13, 14 ಮತ್ತು 15 ರಂದು

ನಡೆಯಲಿರುವ

ಶರಣ ಮೇಳಕ್ಕೆ ಸ್ವಾಗತ

ಜನ್ಮಭೂಮಿ ಭಾರತ ಧರ್ಮಕ್ಷೇತ್ರ ಸಂಗಮ
ಶರಣ ಮೇಳಕೆ ಬಂದಿರುವ ಶರಣರಿಗೆ ಸ್ವಾಗತ ॥ಪ॥
ಗುರುಗಳಿಗೆ ಸ್ವಾಗತ ಹಿರಿಯರಿಗೆ ಸ್ವಾಗತ
ಕಿರಿಯರಿಗೆ ಸ್ವಾಗತ ಸರ್ವರಿಗೂ ಸ್ವಾಗತ ॥ಅ.ಪ.॥
ಧರ್ಮ ನೀತಿ ನ್ಯಾಯ ಶಾಂತಿ
ಸಾರುತಿರುವ ಮೇಳವು
ಮನುಜರೆಲ್ಲರೊಂದೆ ಎಂದು
ಆದರಿಸುವ ಮೇಳವು ॥ ಓ ದಿವ್ಯ ಮೇಳವು. ॥೧॥
ಶ್ರೀ ಸಂಗಮೇಶನ ದಿವ್ಯತಾಣ ಸಂಗಮ
ಗುರು ಬಸವೇಶನ ಐಕ್ಯಕ್ಷೇತ್ರ ಸಂಗಮ
ಮಲಪ್ರಭೆ-ಕೃಷ್ಣೆಯರು ಸೇರುತಿರುವ ಸಂಗಮ
ಮಹಾಮನೆಯ ಹೊಂದಿರುವ ಧರ್ಮಕ್ಷೇತ್ರ ಸಂಗಮ
ಓ ದಿವ್ಯ ಕ್ಷೇತ್ರವು ॥೨॥
ಬಸವ ಕ್ರಾಂತಿ ದಿವ್ಯದಿನದಿ ನಾವು-ನೀವು ಸೇರುವ
ಗುರು ಬಸವಣ್ಣನ ಹಿಗ್ಗಿನಿಂದ ಸ್ಮರಿಸುವಾ
ಶರಣ ಧರ್ಮ ಅರಿಯುವ ಶರಣರಾಗಿ ಬೆಳೆಯುವ
ಬಸವ ಕಿರಣವಾಗಿ ನಾವು ಇಲ್ಲಿಂದ ಸಾಗುವ ॥
ಓ ದಿವ್ಯ ಮೇಳವು, ಓ ದಿವ್ಯ ಮೇಳವು. ॥೩॥

ರಚನೆ : ಜಗದ್ಗುರು ಮಾತೆ ಮಹಾದೇವಿ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಕ್ರಾಂತಿ ದಿನದ ಅಂಗವಾಗಿ

ಶರಣ ಮೇಳ

ಶರಣ ಬಂಧುಗಳೇ

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ 1988ನೆಯ ಇಸವಿ 14, 15 ಮತ್ತು 16ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು. ತುಂಬಿ ನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನ ಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಾಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಕ್ರಾಂತಿ ದಿನ(ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯುಲಿದ್ದು, ನಾಲ್ಕನೆಯ ಶರಣ ಮೇಳವು 1991ನೇ ಇಸವಿಯ ಜನವರಿ 13, 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಧರ್ಮಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮ ಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣ ಜೀವಾಳ

ದೂರವಾಣಿ :
ಕೂಡಲ ಸಂಗಮ : 38
ಬೆಂಗಳೂರು : 325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ–587115.
ತಾ-ಹುನಗುಂದ, ಜಿಲ್ಲೆ–ಬಿಜಾಪುರ

ಅಖಂಡ ವಚನ ಪಠಣ ಸಪ್ತಾಹ ಕಾರ್ಯಕ್ರಮ
ಪ್ರಾರಂಭೋತ್ಸವ

ದಿ. 9–1–1991 ಬುಧವಾರ ಸಮಯ : ಬೆಳಿಗ್ಗೆ 8 ಗಂಟೆ

ಸನ್ನಿಧಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು
ಬಸವ ಧರ್ಮ ಪೀಠ, ಕೂಡಲ ಸಂಗಮ

ಬಸವ ಧರ್ಮ ಪೀಠದ ಮಹಾಮನೆಯ ಬಸವ ಮಂಟಪದಲ್ಲಿ ಅಖಂಡ ವಚನ ಪಠಣ ಕಾರ್ಯಕ್ರಮವು ಪ್ರಾರಂಭವಾಗಲಿದ್ದು, ಒಬ್ಬೊಬ್ಬರು ಒಂದು ಗಂಟೆಯ ಕಾಲ ವಚನ ಪಠಣವನ್ನು ಮಾಡಲಿದ್ದಾರೆ. ಹಗಲು–ರಾತ್ರಿ ಪಠಣ ಕಾರ್ಯಕ್ರಮವು ಒಂದು ವಾರ ಕಾಲ ನಡೆಯಲಿದ್ದು, ಬುಧವಾರ ದಿ: 16-1-1991 ರಂದು ಬೆಳಿಗ್ಗೆ 8 ಗಂಟೆಗೆ ಮಂಗಲಗೊಳ್ಳಲಿದೆ. ವಚನ ಪಠಣದ ಮಧ್ಯೆ ಶ್ರೀ ಗುರು ಬಸವಲಿಂಗ ಮಂತ್ರ ಪಠಣವೂ ವಿಶೇಷ ಪೂಜೆಯೊಡನೆ ಆಗಾಗ ನಡೆಯುತ್ತದೆ.

ಶರಣ ಬಂಧುಗಳಿಗೆ ಸೂಚನೆ

ಅಖಂಡ ವಚನ ಪಠಣದಲ್ಲಿ ಭಾಗವಹಿಸುವ ಅಪೇಕ್ಷೆಯುಳ್ಳ ಶರಣರು ಮೊದಲಿಗೇ ತಮ್ಮ ಹೆಸರುಗಳನ್ನು ಬರೆದು ಕಳಿಸಬಹುದು! 168 ಜನರಿಗೆ ಮಾತ್ರ ಅವಕಾಶ ಇರುವ ಕಾರಣ ಬೇಗನೆ ಹೆಸರುಗಳನ್ನು ತಿಳಿಸುವುದು ಕ್ಷೇಮ.

ನಿಯಮ : ಸ್ನಾನ ಮಾಡಿ, ಮಡಿವಸ್ತ್ರಗಳನ್ನುಟ್ಟು, ಅಲ್ಲಿ ಒದಗಿಸುವ ವಿಶೇಷ ಮೇಲುವಸ್ತ್ರವನ್ನು ಹೊದ್ದು ಪಠಣ ಮಾಡಬೇಕು.

ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ
ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು
ಬಸವಣ್ಣ ನಡೆದುದೇ ಮಾರ್ಗ ಅಖಿಳಗಣಂಗಳಿಗೆ
ನುಡಿದುದೇ ವೇದ ಮಹಾಪುರುಷರಿಗೆ

—ಮರುಳ ಶಂಕರದೇವರು

ವಚನ ಪಠಣವನ್ನು ಒಂದು ಧಾರ್ಮಿಕ ವಿಧಿಯನ್ನಾಗಿ ರೂಪಿಸಿಕೊಳ್ಳಬೇಕು. ಇದಕ್ಕೆ ನೆರವಾಗುವಂತೆ "ವಚನ ಸಂಗಮ" ಪುಸ್ತಕವು ಭಾವಾರ್ಥ ಸಹಿತವಾಗಿ ಲಭ್ಯವಿರುತ್ತದೆ. ಬೆಲೆ : 5-50

ಶರಣ ಮೇಳ - 12-1-1991

ಶನಿವಾರದ ಕಾರ್ಯಕ್ರಮಗಳು

(ಆಹ್ವಾನಿತರು ಮತ್ತು ಅನುಮತಿ ಪಡೆದವರಿಗೆ ಮಾತ್ರ)

ಸ್ಥಳ : ಮಹಾಮನೆ ಮಹಾಮಠದ ಆವರಣ, ಕೂಡಲ ಸಂಗಮ.

1. **ಧ್ವಜಾರೋಹಣ :** ಬೆಳಿಗ್ಗೆ 9–50
   ಶರಣ. ಜಿ. ಎಂ. ತುಪ್ಪದ
   (ನಿ) ಮುಖ್ಯೋಪಾಧ್ಯಾಯರು ಮತ್ತು ಸಂಸ್ಥಾಪಕರು
   ಕೂಡಲ ಸಂಗಮೇಶ್ವರ ಮಾಧ್ಯಮಿಕ ಶಾಲೆ, ಕೂಡಲ ಸಂಗಮ
2. ಬಸವ ಧರ್ಮ ಸಂಸತ್ ಅಧಿವೇಶನ
   ಬೆಳಿಗ್ಗೆ 10 ರಿಂದ 1 ಗಂಟೆಯವರಿಗೆ
   ವಿಷಯ ಮಂಡನೆ, ಚರ್ಚೆ ಮತ್ತು
   ನಿರ್ಣಯ.
3. ಸಾಮೂಹಿಕ ಇಷ್ಟಲಿಂಗ ಪೂಜೆ
   ಮಧ್ಯಾಹ್ನ 3 ರಿಂದ 6ರ ವರೆಗೆ.
   ವೀಡಿಯೋ ಚಿತ್ರೀಕರಣ.
4. ಬಸವ ಧರ್ಮ ಸಂಸತ್ ಸಭೆ
   ನೂತನ ಸದಸ್ಯರ ಆಯ್ಕೆ
   ಸಂಜೆ : 7 ರಿಂದ 8 ರ ವರೆಗೆ
5. ಬಸವ ಧರ್ಮ ಪೀಠದ ದಾನಿಗಳಿಗೆ
   ಸತ್ಕಾರ ರಾತ್ರಿ 8 ರಿಂದ 9ರ ವರೆಗೆ
6. ಸಾಂಸ್ಕೃತಿಕ ಕಾರ್ಯಕ್ರಮಗಳು

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ.

—ಶಿವಯೋಗಿ ಸಿದ್ಧರಾಮೇಶ್ವರ

ಶರಣ ಮೇಳ .. ಬಸವ ಧರ್ಮ ಸಂಸತ್ ಸಭೆ

ಚಿಂತನಗೋಷ್ಠಿ - ಸಮಾವೇಶ ೧

ದಿನಾಂಕ 12-1-1991 ಶನಿವಾರ ಸಮಯ ಬೆಳಿಗ್ಗೆ 10 ಗಂಟೆ

ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು
ಅಧ್ಯಕ್ಷತೆ : ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು
ಸಭಾಪತಿ : ಶರಣ. ಎನ್. ಪುಟ್ಟರುದ್ರಪ್ಪ
ಮುಖ್ಯ ಅತಿಥಿಗಳು : ಶರಣ. ಜಿ. ಎಂ. ತುಪ್ಪದ
ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಚಿಂತನ ಮಂಥನ : ಶರಣ–ಶರಣೆಯರಿಂದ

ಚರ್ಚಿಸಲಾಗುವ ವಿಷಯಗಳು

1. ಮಂಡಲ್ ವರದಿ ಮತ್ತು ಚಿನ್ನಪ್ಪ ರೆಡ್ಡಿ ವರದಿಗಳು, ಅವುಗಳ ಹಿರಿಮೆ–ದೋಷಗಳು, ನಿರ್ಣಯ.

ವಿಷಯ ಮಂಡನೆ ಮತ್ತು ಚರ್ಚೆ } ಶರಣ ಮಹಾದೇವ ಬಣಕಾರ್ (ಮಾಜಿ ಶಾಸಕರು ಮತ್ತು ಸಾಹಿತಿಗಳು)

2. 1991 ರ ಜನಗಣತಿ ಕುರಿತು ಕೆಲವು ವಿವರಗಳನ್ನು ಚರ್ಚಿಸುವುದು.
3. ಕನ್ನಡ ನಾಡಿನ ಪ್ರದೇಶಗಳಿಗೆ ಸಾಂಸ್ಕೃತಿಕ ಹೆಸರುಗಳು.
4. ಗಣಾಚಾರ ದಳ ರಚನೆ.
5. ಕೂಡಲ ಸಂಗಮ ಕ್ಷೇತ್ರಾಭಿವೃದ್ಧಿ, ವಿಶ್ವನಾಥ ರೆಡ್ಡಿ ಮುದ್ನಾಳ್ ವರದಿಯ ಪರಿಶೀಲನೆ.
6. ಪ್ರಥಮ ಗುರು ಬಸವಣ್ಣನವರಿಗೆ ಆದಿ ಪೂಜೆ.
7. ಶರಣ ಮೇಳಕ್ಕೆ ಶ್ರಮಿಸುವವರಿಗೆ ಬಹುಮಾನ ವಿತರಣೆ ಇಡಬೇಕೆ?
8. ಮಕ್ಕಳಿಗೆ, ಅಂಗಡಿಗಳಿಗೆ, ಕಾರ್ಖಾನೆ, ಬಡಾವಣೆಗಳಿಗೆ ಹೆಸರಿಡುವಿಕೆ.

ಈ ಪ್ರಶ್ನೆ–ಸಮಸ್ಯೆ ಕುರಿತು ಚಿಂತನೆ ಮಾಡಿಕೊಂಡು ಬರಬೇಕು. ಭಾಗವಹಿಸಿದವರು ಯಾವುದಾದರೂ ಮಹತ್ವದ ಪ್ರಶ್ನೆಯನ್ನು ಸೂಚಿಸಿದರೆ, ಅದರ ಪ್ರಾಮುಖ್ಯತೆಯ ಆಧಾರದ ಮೇಲೆ ಅದನ್ನೇ ಚರ್ಚೆ–ನಿರ್ಣಯಗಳಿಗೆ ಎತ್ತಿಕೊಳ್ಳಲಾಗುವುದು. ಕೇಳುವ ಸಮಸ್ಯೆಗಳೇನಾದರೂ ಇದ್ದರೆ ಸಿದ್ಧತೆ ಮಾಡಿಕೊಂಡುಬರಬಹುದು. ಮತ್ತು ಮೇಲೆ ಸೂಚಿಸಿದ ವಿಷಯಗಳ ಬಗ್ಗೆ ಚಿಂತನೆ ಮಾಡಿಕೊಂಡು ಬಂದರೆ ಒಳ್ಳೆಯದು.

ಕಾರ್ಯಕ್ರಮ ನಿರ್ವಹಣೆ ; ಬೆಳಿಗ್ಗೆ. ಶರಣ. ಕೆ. ಡಿ. ಪರಮಾವಿ, ಕಾರ್ಯದರ್ಶಿ.

ಚಿಂತನ ಗೋಷ್ಠಿಯಲ್ಲಿ ಭಾಗವಹಿಸುವವರು

ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಹಿರೇಮಠ, ಭಾಲ್ಕಿ.
ಪೂಜ್ಯ ಶ್ರೀ ಸಿದ್ಧರಾಮೇಶ್ವರ ಶರಣರು, ಬಸವಕಲ್ಯಾಣ.
ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ, ಕೂಡಲ ಸಂಗಮ.
ಪೂಜ್ಯ ಶ್ರೀ ದಯಾನಂದ ಸ್ವಾಮಿಗಳು, ಬೆಂಗಳೂರು.
ಪೂಜ್ಯ ಶ್ರೀ ಅಯ್ಯಪ್ಪಯ್ಯ ಸ್ವಾಮಿಗಳು, ರಾಸ್ತಾಪುರ.
ಪೂಜ್ಯ ಶ್ರೀ ಬಸವರಾಜ ಸ್ವಾಮಿಗಳು, ಕುಂದಗೋಳ.
ಪೂಜ್ಯ ಶ್ರೀ ವೀರಮಹಾಂತೇಶ ಶಿವಾಚಾರ್ಯರು, ನೀಲಗುಂದ.
ಪೂಜ್ಯ ಶ್ರೀ ಶಾಂತಾನಂದ ಸ್ವಾಮಿಗಳು, ಗಾಮನಗಟ್ಟಿ.
ಪೂಜ್ಯ ಶ್ರೀ ಶ್ರದ್ಧಾನಂದ ಸ್ವಾಮಿಗಳು, ಬಿಜಾಪುರ.
ಪೂಜ್ಯ ಶ್ರೀ ರಾಮಲಿಂಗ ಸ್ವಾಮಿಗಳು, ಬಿಜಾಪುರ,
ಪೂಜ್ಯ ಶ್ರೀ ಮಹಾನಂದಾ ತಾಯಿ ಹಿರೇಮಠ, ಮುಗಳಿ,

ಶರಣರುಗಳಾದ :

ಅಂದ್ರಾನಪ್ಪ ಕುಂದರಗಿ, ಗಜೇಂದ್ರಗಡ.
ಡಾ॥ ಜಿ. ಆರ್. ತೆಮಗೊಂಡ, ಬಾಗಿಲಕೋಟೆ
ಎಸ್. ಎಸ್. ಹಿರೇಮಡಗಿ, ಬಿಜಾಪುರ.
ಬಿ. ಸಿ. ಚಂದ್ರಪ್ಪಾಜಿ ಅರಸು, ಬ್ರಹ್ಮಸಂದ್ರ
ಬಸವರಾಜ ಲುಕ್, ಬಾಗಲಕೋಟೆ.
ಬಸವರಾಜ ಮಡಿವಾಳರ, ಆಲಮಟ್ಟಿ.
ಹೆಚ್. ಎಸ್. ಬಸವರಾಜ, ಭದ್ರಾವತಿ.
ಜಯಮ್ಮ ಚಂದ್ರಪ್ಪ, ಶಿವಮೊಗ್ಗ,
ಟಿ. ಬಸವರಾಜಪ್ಪ, ವಿಜಯಪುರ
ಬಸವಕುಮಾರ ಪಾಟೀಲ, ಬೀದರ.
ಗದಿಗೆಪ್ಪ ದೇಶನೂರು, ಬೈಲಹೊಂಗಲ.
ಡಾ॥ ಶಿವಗೌಡ ಪಾಟೀಲ, ಸಂಕೇಶ್ವರ,
ಬಾಣೂರು ಚನ್ನಪ್ಪ, ಚಿಕ್ಕಮಗಳೂರು,
ಕುಮಾರ ಕಕ್ಕಯ್ಯ ಪೋಳ, ಬಿಜಾಪುರ,
ಎಸ್. ಬಿ. ಸುಲ್ತಾನಪುರೆ, ಬೆಳಗಾಂವ.
ಮುನಿನಾರಾಯಣಪ್ಪ, ವಿಜಯಪುರ.
ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ.
ಬಾಣೂರು ಹಿರಣ್ಣಯ್ಯ, ತರೀಕೆರೆ.
ಎಸ್. ಲಿಂಗಣ್ಣ, ಚಿತ್ರದುರ್ಗ.
ರಾಮಲಿಂಗಪ್ಪ ದೇವಣಿ, ಬೀದರ,
ಬಾಲಚಂದ್ರ ಚೆನ್ನಿ, ಮಹಾಲಿಂಗಪುರ.
ಚಂದ್ರಶೇಖರಪ್ಪ ಯರನಾಳ, ಇಳಕಲ್.
ವಿಶ್ವನಾಥ ಡೋಣೂರು, ಶಹಾಪುರ,
ಜಿ. ಜಿ. ಪಾಟೀಲ, ಕೂಡಲಸಂಗಮ.
ಆರ್. ಎಸ್. ಹೊನ್ನಪ್ಪನವರು
ಬಿ. ಎಂ. ಹೊರಕೇರಿ, ಬಾದಾಮಿ.
ಡಿ. ಬಿ. ಕೊಳ್ಳಿ, ಬೈಲಹೊಂಗಲ.
ಮೃತ್ಯುಂಜಯ ಅಂಗಡಿ. ಕಡಕೋಳ,
ಎಂ. ಸುಬ್ಬಣ್ಣ, ಹುಬ್ಬಳ್ಳಿ.
ಎಲ್. ಗುರುಸ್ವಾಮಿ, ಬೆಂಗಳೂರು.
ಮ. ನ. ಬೊಮ್ಮಲಿಂಗಪ್ಪ,
ಜಿ. ಚನ್ನಯ್ಯ, ಚಳ್ಳಕೆರೆ.
ಶಿವಾನಂದಪ್ಪ ರುಳಿ, ಇಳಕಲ್.
ಸಿ. ಬಸವರಾಜು, ತುಮಕೂರು,
ಮೌ॥ ಕೆ. ಪಿ. ಪೂವಯ್ಯ, ಚಿಕ್ಕಮಗಳೂರು.
ಕೆ. ಎಸ್. ವಿಶ್ವೇಶ್ವರಯ್ಯ, ಚಿಕ್ಕಬಳ್ಳಾಪುರ.

ಬಸವ ಧರ್ಮ ಸಂಸತ್ ಸದಸ್ಯರು.

ರಾಷ್ಟ್ರೀಯ ಬಸವ ದಳಗಳ ಸಂಘಟಕರು, ಸಂಚಾಲಕರು, ಸದಸ್ಯರೂ ಆದ ಶರಣ ಶರಣೆಯರು.

ಅನುಭವ ಮಂಟಪ, 770 ಜನ ಅಮರ ಗಣಂಗಳ ಸಾಮೂಹಿಕ ಇಷ್ಟಲಿಂಗಪೂಜೆ-ವೀಡಿಯೋ ಚಿತ್ರೀಕರಣ.

ದಿ. 12-1-1991, ಶನಿವಾರ. ಸಮಯ ಮಧ್ಯಾಹ್ನ 3ರಿಂದ 6

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಧರ್ಮಾನುಯಾಯಿಗಳನ್ನು ಮತ್ತು 770 ಜನ ಶರಣರನ್ನು ರೂಪಿಸಿದರು, ಸಂಘಟಿಸಿದರು. ಇಂಥದೊಂದು ದೃಶ್ಯವು ಕಲ್ಪಿಸಿಕೊಳ್ಳಲಿಕ್ಕೇ ರೋಮಾಂಚಕಾರಿ,

ಅಂದು ಈ ಪ್ರಮಥರು ಅನುಭವ ಮಂಟಪದ ವೇದಿಕೆಯ ಮೇಲೆ ಒಟ್ಟಾಗಿ ಸೇರಿದರು, ಚಿಂತನೆ ಮಾಡಿದರು, ದೇವನನ್ನು ಪೂಜಿಸಿದರು, ಕಾಲ್ಪನಿಕ ಕೈಲಾಸವನ್ನು ಅಲ್ಲಗಳೆದು ಪ್ರತ್ಯಕ್ಷ ಕೈಲಾಸವನ್ನೇ ರೂಪಿಸಿದರು. ಅಂದಿನ, ಬಸವಾದಿ ಪ್ರಮಥರ ಜಾಡುಹಿಡಿದು, ಇಂದು ಒಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ವ್ಯವಸ್ಥೆ ಮಾಡಲಾಗಿದೆ. ಇದರ ವೀಡಿಯೋ ಚಿತ್ರೀಕರಣವನ್ನು ಏರ್ಪಡಿಸಲಾಗಿದೆ.

770 ಜನ ಅಮರ ಗಣಂಗಳ ಸಾಮೂಹಿಕ ಲಿಂಗಪೂಜೆ-ವೀಡಿಯೋ ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕೆನ್ನುವ ಶರಣ ಬಂಧುಗಳು ಕೆಳಗಿನ ಸೂಚನೆ ಪಾಲಿಸಬೇಕು.

1. ಶನಿವಾರ 12-1-91 ರಂದು ಬೆಳಿಗ್ಗೆ 10 ಗಂಟೆಯ ಒಳಗೆ ಕೂಡಲ ಸಂಗಮಕ್ಕೆ ಬಂದು ತಲ್ಪಬೇಕು.
2. ಪ್ರವೇಶ ಶುಲ್ಕ 30 ರೂ. ತುಂಬಿ (ಮೊದಲೇ ಎಂ. ಓ, ಡ್ರಿ.ಡಿ, ಮೂಲಕವು ತುಂಬಬಹುದು) ಬ್ಯಾಡ್ಜ್ ಪಡೆಯಬೇಕು.
3. ಬಿಳಿಯ ಸಮವಸ್ತ್ರ ಉಟ್ಟು, ಮೇಲೆ ಕಾವಿಯ ಬಣ್ಣದ ಸ್ಕಾರ್ಫ್ (ಮೇಲು ಹೊದ್ದಿಕೆ) ಹಾಕಿಕೊಂಡು ಕುಳಿತುಕೊಳ್ಳಬೇಕು.
4. ಪೂಜೆಯ ಪರಿಕರಗಳಾದ ಲೋಟ, ತಟ್ಟೆ, ವಿಭೂತಿ, ಊದಿನಕಡ್ಡಿ, ಚಿಕ್ಕದೀಪ, ಕರ್ಪೂರ, ಗಂಟೆ, ಕಲ್ಲು ಸಕ್ಕರೆ, ಒಂದು ಚಿಕ್ಕ ಆಸನ ತರಬೇಕು.
5. ಉತ್ಸವ ಸಮಿತಿಯ ವತಿಯಿಂದ ಕಲ್ಲುಸಕ್ಕರೆ, ಗಂಧ, ಪತ್ರೆ ಕೊಡಲಾಗುವುದು. ಸಾಧ್ಯವಾದರೆ ಹೂವಿನ ಪೊಟ್ಟಣ ಕಟ್ಟಿಸಿಕೊಂಡು ಬಂದರೆ, ಇನ್ನಿತರರಿಗೂ ಹೂವನ್ನು ಕೊಡಬಹುದು.
6. ಇಷ್ಟಲಿಂಗ ಪೂಜೆ ಮಾಡಬೇಕು ಎನ್ನುವವರು ಮರೆಯದೆ ಇಷ್ಟಲಿಂಗವನ್ನು ಹೊಂದಿರಬೇಕು. ಇನ್ನೂ ತಮ್ಮದೇ ಆದ ಇಷ್ಟಲಿಂಗವನ್ನು ದೀಕ್ಷೆಯ ಮೂಲಕ ಹೊಂದಿಲ್ಲದ ಮಕ್ಕಳಿಗಾಗಿ, ಸ್ಥಳದಲ್ಲೇ ಮಾರಾಟಕ್ಕೆ ಲಭ್ಯವಾಗುವ ಲಿಂಗಗಳನ್ನೂ ಕೊಂಡು ಪೂಜೆಗೆ ಬಳಸಬಹುದು.
7. ಪೂಜೆಯನ್ನು ಕುಳಿತು, ನೋಡಬೇಕೆಂಬ ಲಿಂಗಾಯತರಿಗೂ ಮತ್ತು ಇತರರಿಗೂ ಅವಕಾಶ ಉಂಟು. ಅವರೂ ಬಿಳಿ ಸಮವಸ್ತ್ರ ಉಟ್ಟು, ಕಾವಿ ಸ್ಕಾರ್ಫ್ ಹಾಕಿರಬೇಕು ಮತ್ತು ಪ್ರವೇಶ ಶುಲ್ಕ ನೀಡಿ ಬ್ಯಾಡ್ಜ್ ಪಡೆದಿರಬೇಕು. ಇವರು ಸಾಮೂಹಿಕವಾಗಿ ನಡೆಯುವ ಮಂತ್ರಜಪ, ಧ್ಯಾನಗಳಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ.

ಬಸವ ಧರ್ಮ ಪೀಠದ ದಾಸೋಹಿಗಳಿಗೆ ಸತ್ಕಾರ

ಶನಿವಾರ ದಿ. 12 1-1991, ಸಂಜೆ 7 ರಿಂದ 9

ಕಟ್ಟಡ ನಿಧಿಯ (ಕೋಣೆ ಕಟ್ಟಿಸುವ) ದಾಸೋಹಿಗಳು.

ಶರಣರುಗಳಾದ

೧. ಪುಷ್ಪ ಮತ್ತು ಗುರುಬಸಪ್ಪ, ಕಾಟೇರಿ, ತಮಿಳುನಾಡು.
೨. ಶಂಕರ್ ದುಂಡಪ್ಪ ಭಂಗಾರಿ, ಸಂಕೇಶ್ವರ.
೩. ಅಡಿವೆಪ್ಪ ಹನುಮಂತಪ್ಪ ತಂಬಾಕೆ, ತಾಳಮಡಗಿ, ಬೀದರ.
೪. ಪಾರ್ವತಮ್ಮ ಮತ್ತು ಬಿ. ಎಂ. ಈಶ್ವರಪ್ಪ, ಬೆಂಗಳೂರು.
೫. ರಾಜಸೇವಾಧುರೀಣ ಎಂ. ಕೆ. ನಾರಾಯಣಪ್ಪ ಮತ್ತು ಮುನಿಯಮ್ಮ, ಮೈಸೂರು.
೬. ಕಲ್ಲಮ್ಮ ವಿರೂಪಾಕ್ಷಗೌಡ ಪಾಟೀಲ, ಧಾರವಾಡ.
೭. ಲಕ್ಷ್ಮೀ. ಜೆ. ರಾಜು, ಸಕಲಟ್ಟಿ. ತಮಿಳುನಾಡು.
೮. ಈರಮ್ಮ ವಿರುಪಾಕ್ಷಗೌಡ ಪಾಟೀಲ, ಹುಬ್ಬಳ್ಳಿ.
೯. ಸಿದ್ದಪ್ಪ ಶಿವಪ್ಪ ಲಕ್ಕಣ್ಣನವರ, ರಾಯಾಪುರ, ಧಾರವಾಡ.
೧೦. ಪಾರ್ವತಮ್ಮ ಮತ್ತು ಮಲ್ಲಿಕಾರ್ಜುನಪ್ಪ ಪಟ್ಟಣಶೆಟ್ಟಿ, ಧಾರವಾಡ.
೧೧. ರುದ್ರಪ್ಪ ಚನ್ನಬಸಪ್ಪ ದೊಡ್ಡಮನಿ. ಧಾರವಾಡ.
೧೨. ಮಹಾಂತವ್ವ ಗುರುಲಿಂಗಪ್ಪ ಕೋರಿ, ಧಾರವಾಡ.
೧೩. ವೀರಸಂಗಪ್ಪ ಹೊಸಮನಿ, ಧಾರವಾಡ.
೧೪. ಪುಂಡಲೀಕಪ್ಪ ಮಲ್ಲಶೆಟ್ಟೆಪ್ಪ ಗುಮ್ಮ, ಬೆಳ್ಳೂರು, ಬೀದರ.
೧೫. ನಿರ್ಮಲಾದೇವಿ ಮತ್ತು ಬಸವರಾಜಪ್ಪ ಗಾಯತೊಂಡೆ, ಬೀದರ.
೧೬. ರತ್ನಮ್ಮ ಮತ್ತು ಕಾಶಪ್ಪ, ಗಾಯತೊಂಡೆ, ಬೀದರ.
೧೭. ಮುರಳೀಧರರಾವ ಕಾಳೆ, ಬೀದರ.
೧೮. ರಾಜಕುಮಾರ ಭೋರಾಳೆ, ಭಾತಂಬ್ರಾ. ಬೀದರ.
೧೯. ಶಿವರಾಜ ಪಾಟೀಲ, ಅತಿವಾಳ, ಬೀದರ.
೨೦. ಶಕುಂತಲಾ ಮತ್ತು ಮಲ್ಲಿಕಾರ್ಜುನಪ್ಪ ಹುಡಗೆ, ಬೀದರ.
೨೧. ಪುತಳಾಬಾಯಿ ಮತ್ತು ಚಂದ್ರಪ್ಪ ಗೌರಶೆಟ್ಟಿ, ಬೀದರ.
೨೨. ಚಂದ್ರಮ್ಮ ಮತ್ತು ನಾಗಣ್ಣ ಜಾಬಶೆಟ್ಟಿ, ಬೀದರ.
೨೩. ನೀಲಮ್ಮ ಮತ್ತು ನೀಲಿ ವೀರಭದ್ರಪ್ಪ, ಆದವಾನಿ.
೨೪. ಸಿ. ಎಸ್. ಶಂಕರಪ್ಪ, ಆದವಾನಿ.
೨೫. ಗ್ರಾಮಸ್ಥರು, ಬಾದಾಮಿ, ಜಿಲ್ಲ–ಬಿಜಾಪುರ.
೨೬. ಗ್ರಾಮಸ್ಥರು ಯರಗಟ್ಟಿ, ಜಿಲ್ಲ–ಬೆಳಗಾಂವ.

೨೭. ಚಂದ್ರಕಲಾ ಮತ್ತು ಸಿ. ಬಸವರಾಜು, ತುಮಕೂರು.
೨೮. ರೇವಮ್ಮ ಮತ್ತು ಎಸ್. ಈಶ್ವರಪ್ಪ, ಬೆಂಗಳೂರು.
೨೯. ಸಿ. ವಿ. ತಿಪ್ಪೇಸ್ವಾಮಿ, ಚಳ್ಳಕೆರೆ, ಜಿ–ಚಿತ್ರದುರ್ಗ.
೩೦. ಸಿ. ಎ. ಶಿವಣ್ಣ, ಚಳ್ಳಕೆರೆ, ಜಿ–ಚಿತ್ರದುರ್ಗ.
೩೧. ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ, ಬೆಂಗಳೂರು.
೩೨. ಬಿ. ಎಂ. ಹೊರಕೇರಿ, ಬಾದಾಮಿ.
೩೩. ಪ್ರತಾಪ ಮಲ್ಲಪ್ಪ ಅಂಕಸದೊಡ್ಡಿ, ಬಾದಾಮಿ.
೩೪. ಶಾಂತಾ. ಆರ್. ಚಂದ್ರಶೇಖರ್, ಸಕಲಟ್ಟಿ ತಮಿಳುನಾಡು.
೩೫. ನಾಗಮ್ಮ ಮತ್ತು ರಾಜಬೆಟ್ಟಪ್ಪ, ಸಕಲಟ್ಟಿ, ತಮಿಳುನಾಡು.
೩೬. ನೀಲಮ್ಮ. ಬಿ. ಎಂ. ಮುದ್ದಪ್ಪ, ದೇನಾಡು, ತಮಿಳುನಾಡು.

ವಿ. ಸೂ. :– ಬಸವ ಧರ್ಮ ಪೀಠದಲ್ಲಿ ಕಟ್ಟಡ ಕಟ್ಟಿಸಲು ಈ ಮೊದಲು 12-1-90 ರವರೆಗೆ ಕೊಟ್ಟ ದಾಸೋಹಿಗಳಿಗೆ ಹಿಂದಿನ ಶರಣ ಮೇಳದಲ್ಲೇ ಸತ್ಕಾರ ಮಾಡಲಾಗಿದೆ. ಈ ದಿನಾಂಕದ ನಂತರ ಕೊಟ್ಟವರ ಹೆಸರು ಮಾತ್ರ ಈಗ ಪ್ರಕಟಿಸಲಾಗಿದೆ.

ಶರಣ ಮೇಳದ ಕಾಯಂ ನಿಧಿಗೆ (ದಾಸೋಹಕ್ಕಾಗಿ) ಪುದುವಟ್ಟು ಇಟ್ಟವರು

1.	ಶರಣೆ. ಶಿವಮ್ಮ. ಪಿ.ಸಿ. ಗುರುಮಲ್ಲಪ್ಪ, ಮೈಸೂರು	5001–00
2.	ಶರಣ. ಬಿ.ಕೆ. ನಂಜುಂಡಪ್ಪ. ಬೆಂಗಳೂರು.	5001–00

- ಬಸವ ಧರ್ಮಪೀಠದ ಆಶ್ರಯದಲ್ಲಿ ನಿತ್ಯದಾಸೋಹ ಯೋಜನೆಗೆ ದೇಣಿಗೆ ಕೊಡುವವರು. 1111-00 ರೂಗಳನ್ನು ಕೊಟ್ಟು ತಮ್ಮ ಹೆಸರಿನಲ್ಲಿ ದಾಸೋಹ ಮಾಡಬೇಕಾದ ದಿವಸವನ್ನು ತಿಳಿಸಬೇಕು.
- ಶರಣ ಮೇಳದ ಸಮಯದಲ್ಲಿ ದಾಸೋಹ ನಡೆಸಬೇಕು ಎನ್ನುವವರು, ವಾರ್ಷಿಕ ಬಡ್ಡಿಯ ಮೊತ್ತವನ್ನು ಗಮನದಲ್ಲಿ ಇರಿಸಿಕೊಂಡು ದೇಣಿಗೆ ಕೊಡಬೇಕು. ಯಾರ ಹೆಸರಿನಲ್ಲಿ ದಾಸೋಹ ಇಡಬೇಕು ಎಂಬುದನ್ನು ತಿಳಿಸಬೇಕು.
- ಕಟ್ಟಡ ನಿಧಿಗೆ ಧನಸಹಾಯ ಮಾಡುವವರು ಸ್ವಯಂ ಪ್ರೇರಣೆಯಿಂದ ಮುಂದೆ ಬರಬೇಕು.

ಮಹಾಮನೆ ಆವರಣದಲ್ಲಿ ಮೂರ್ತಿಗಳನ್ನು ಮಾಡಲು ನೆರವು ನೀಡಿದ ದಾಸೋಹಿಗಳಿಗೆ ಸತ್ಕಾರ

(ಹಿಂದಿನ ವರ್ಷದಿಂದ ಮುಂದುವರಿದುದು)

ಶರಣರುಗಳಾದ :

೪೩. ಗೌರಮ್ಮಜ್ಜಿ ಲಿಂ॥ ಮಾದಪ್ಪ, ಬೆಂಗಳೂರು.
೪೪. ರಾಷ್ಟ್ರೀಯ ಬಸವ ದಳ, ದೇನಾಡು.
೪೫. ಸುಲೋಚನಮ್ಮ ಮತ್ತು ರೇವಣಸಿದ್ದಪ್ಪ ಹೊನ್ನಪ್ಪನವರು, ಧಾರವಾಡ.
೪೬. ಸುಮಿತ್ರ ಮತ್ತು ಮರಿಬಸಪ್ಪ ದಸದಮನಿ, ಧಾರವಾಡ.
೪೭. ಗಂಗಮ್ಮ ಮತ್ತು ಮಲ್ಲೇಶಪ್ಪ ಕತ್ತೀಶೆಟ್ಟಿ, ಧಾರವಾಡ.
೪೮. ಗಂಗಾಧರ. ಜಿ. ಚನ್ನಿ, ಧಾರವಾಡ.
೪೯. ಬಿ. ಎಸ್. ಉಳ್ಳೀಗೇರಿ, ಧಾರವಾಡ.
೫೦. ಸಾಹುಕಾರ ಸಣ್ಣವೀರಣ್ಣ, ಮಟಮಾರಿ.
೫೧. ನಮಸಯ್ಯ ಬಸವಂತಯ್ಯ ಹಿರೇಮಠ, ಬೆಳಗಾಂವ.
೫೨. ಪಾರ್ವತಮ್ಮ ಶಿವಮಣಿ ಶಿವಪ್ಪಯ್ಯ, ಸಕಲಟ್ಟಿ, ತಮಿಳುನಾಡು.
೫೩. ಎಲೆ ಬಸಪ್ಪನವರು, ವಿಜಯಪುರ.
೫೪. ಶಾಂತಾ. ಆರ್. ಚಂದ್ರಶೇಖರ್, ಸಕಲಟ್ಟಿ, ತಮಿಳುನಾಡು.
೫೫. ಶಿವಮ್ಮ ನಂಜುಂಡನ್, ಸಕಲಟ್ಟಿ, ತಮಿಳುನಾಡು.
೫೬. ಗಂಗಾದೇವಿ. ಕೆ. ರಾಮನ್, ಸಕಲಟ್ಟಿ, ತಮಿಳುನಾಡು.
೫೭. ರೇವತಿ ಶಿವಸುಬ್ರಹ್ಮಣ್ಯಂ, ಸಕಲಟ್ಟಿ, ತಮಿಳುನಾಡು.
೫೮. ದೇವಮ್ಮ. ಎನ್. ಜೋಗಿ, ಸಕಲಟ್ಟಿ, ತಮಿಳುನಾಡು.
೫೯. ಪಾರ್ವತಿ. ಎಂ. ಬಸವರಾಜು, ಸಕಲಟ್ಟಿ, ತಮಿಳುನಾಡು.

5000 ರೂ ಮತ್ತು ಮೇಲಿನ ಮೊತ್ತ ದೇಣಿಗೆಯಾಗಿ ನೀಡಿದ್ದು, ಅಕಸ್ಮಾತ್ ಈ ಪಟ್ಟಿಯಲ್ಲಿ ಕಾಣಿಸಿರದಿದ್ದರೆ, ತಕ್ಷಣವೇ ಪತ್ರ ಬರೆದು ನೆನಪಿಸಬೇಕು. ಈ ಎಲ್ಲ ಶರಣ ಬಂಧುಗಳಿಗೆ ನಾವು ಪತ್ರ ಬರೆದಿದ್ದೇವೆ. ಯಾವುದಾದರೂ ಕಾರಣದಿಂದ ಪತ್ರಗಳು ತಲ್ಪಿಲ್ಲದಿದ್ದರೆ ಈ ಪತ್ರಿಕೆಯನ್ನೇ ಆಹ್ವಾನವೆಂದು ಭಾವಿಸಿ ಬರಬೇಕೆಂದು ಹೃತ್ಪೂರ್ವಕವಾಗಿ ಆಹ್ವಾನಿಸುತ್ತೇವೆ.

೧. ಗ್ರಂಥ ಪ್ರಕಟಣೆಗೆ ಕೊಟ್ಟ ದೇಣಿಗೆ ಬಸವ ಧರ್ಮ ಪೀಠ ಟ್ರಸ್ಟಿಗೆ ಸಂಬಂಧಿಸಿರುವುದಿಲ್ಲ.
೨. ಕೂಡಲ ಸಂಗಮದಲ್ಲಿ 12-1-90 ರಂದು ದಾಸೋಹಿಗಳಿಗೆ ಸತ್ಕಾರ ಮಾಡಲಾದ ಬಳಿಕ ಧನದಾಸೋಹ ಮಾಡಿದವರಿಗೆ ಈಗ ಸತ್ಕಾರಮಾಡಲಾಗುತ್ತಿದೆ.
೩. ಕೆಲವರು ವಾಗ್ದಾನ ಮಾಡಿದ್ದು ಹಣ ಕೊಟ್ಟಿರದಿದ್ದರೆ ಶರಣ ಮೇಳಕ್ಕೆ ಬರುವಾಗ ತಂದು ಕೊಡುವಿರೆಂದು ನಿರೀಕ್ಷಿಸುತ್ತೇವೆ.

ಶರಣ ಮೇಳ—ಉದ್ಘಾಟನಾ ಸಮಾರಂಭ

ದಿ. 13-1-1991, ಭಾನುವಾರ. ಸಮಯ ಬೆಳಿಗ್ಗೆ 10-00

ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು.
(ಪೋಷಕಾಧ್ಯಕ್ಷರು, ಶರಣ ಮೇಳ ಉತ್ಸವ ಸಮಿತಿ)

ಉದ್ಘಾಟನೆ : ಶರಣ. ಎಸ್. ಎಂ. ಕೃಷ್ಣ.
(ವಿಧಾನ ಸಭಾ ಅಧ್ಯಕ್ಷರು, ಬೆಂಗಳೂರು)

ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
(ಬಸವ ಧರ್ಮ ಪೀಠ, ಕೂಡಲ ಸಂಗಮ)

ಅಧ್ಯಕ್ಷತೆ : ಶರಣ. ಅಪ್ಪಾಜಿ ಎಸ್. ನಾಡಗೌಡ.
(ಕಾರ್ಮಿಕ ಮಂತ್ರಿಗಳು, ಕರ್ನಾಟಕ ಸರ್ಕಾರ)

ಮುಖ್ಯ ಅತಿಥಿಗಳಿಂದ

ಭಿತ್ತಿಪಟ ಬಿಡುಗಡೆ : ಶರಣ. ಬಿ. ಎ. ದೇಸಾಯಿ.
(ಅಧ್ಯಕ್ಷರು, ಜಿಲ್ಲಾ ಪರಿಷತ್, ಬಿಜಾಪುರ)

ಪುಸ್ತಕ ಬಿಡುಗಡೆ : ಶರಣ.ಜಿ. ಎಸ್. ಬಾಗಲಕೋಟ.
(ಮಾಜಿ ಸಚಿವರು, ಜಮಖಂಡಿ)

ಪುಸ್ತಕ : "ವಚನ ಸಂಗಮ" (ಕನ್ನಡ ಆವೃತ್ತಿ)

ಮುಖ್ಯ ಉಪನ್ಯಾಸಕರಿಂದ

ಗ್ರಂಥ ಬಿಡುಗಡೆ : ಶರಣ. ಹೀ. ಚಿ. ಶಾಂತವೀರಯ್ಯ.
(ಸಾಹಿತಿಗಳು, ಬೆಂಗಳೂರು)

ಗ್ರಂಥ : "ಜೀವ ಜೀವದ ಭಾವ ಸಂಗಮ"

ಸ್ಕಾರ್ಫ್ ಬಿಡುಗಡೆ : ಶರಣ. ಶಿವಾನಂದ ಕೌಜಲಗಿ.
(ಶಾಸಕರು, ಬೈಲಹೊಂಗಲ)

ಕ್ಯಾಲೆಂಡರ್ ಬಿಡುಗಡೆ : ಶರಣ. ಎಸ್. ಆರ್. ಕಾಶಪ್ಪನವರು.
(ಶಾಸಕರು, ಹುನಗುಂದ)

ಪೂಜಾವಸ್ತ್ರ ಬಿಡುಗಡೆ : ಶರಣ. ಕಲಾಕಂಠೀರವ ಟಿ. ಎಸ್. ಕರಿಬಸಯ್ಯ
(ಚಲನಚಿತ್ರ ನಿರ್ಮಾಪಕರು, ಬೆಂಗಳೂರು)

ವಿಶೇಷ ಆಹ್ವಾನಿತರು :

ಶರಣ. ಶ್ರೀರಂಗ ದೇವರಾಯುಲು. (ಶಾಸಕರು, ಗಂಗಾವತಿ)

ಶರಣೆ, ಲಲಿತಾರಾಣಿ, ಶ್ರೀರಂಗದೇವರಾಯುಲು.
(ಸದಸ್ಯರು, ಜಿಲ್ಲಾ ಪರಿಷತ್, ರಾಯಚೂರು)

ಶರಣ. ಎಂ. ಪಿ. ನಾಡಗೌಡ್ರು. (ವಿಧಾನ ಪರಿಷತ್ ಸದಸ್ಯರು, ಬಾಗಲಕೋಟ)

ಶರಣ. ಹೆಚ್. ವೈ. ಮೇಟಿ. (ಶಾಸಕರು, ಗುಳೇದಗುಡ್ಡ)

ಶರಣ ಮೇಳ—ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿ

ದಿ. 13-1-1991, ಭಾನುವಾರ. ಸಮಯ : ಮಧ್ಯಾಹ್ನ 4-00

ಅಧ್ಯಕ್ಷತೆ : ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು.
(ಬಸವ ಮಂದಿರ, ಚಿಕ್ಕಮಗಳೂರು)

ಉದ್ಘಾಟನೆ : ಶರಣ. ಧರ್ಮಸಿಂಗ್.
(ಗೃಹಮಂತ್ರಿಗಳು, ಕರ್ನಾಟಕ ಸರ್ಕಾರ)

ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
(ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ, ಕೂಡಲ ಸಂಗಮ)

ಮುಖ್ಯ ಅತಿಥಿಗಳಿಂದ : ಶರಣ. ಎಂ. ಎಲ್. ಉಸ್ತಾದ್.
ಪುಸ್ತಕ ಬಿಡುಗಡೆ (ಸಚಿವರು, ಗಣಿ ಮತ್ತು ಭೂ ವಿಜ್ಞಾನ)

ಪುಸ್ತಕ : Lord Basava, The light of the world.

ಪುಸ್ತಕ ಪರಿಚಯ : ಶರಣ. ಎಂ. ರಂಜಾನ್ ದರ್ಗಾ.
(ಪತ್ರಿಕೋದ್ಯಮಿ–ಬಂಡಾಯ ಸಾಹಿತಿ, ಬೆಂಗಳೂರು)

ಪುಸ್ತಕ ಬಿಡುಗಡೆ : ಶರಣ. ಪಿ. ಡಿ. ಪಾಲ್ಕಂಡವಾರ್.
(ಸಂಸ್ಥಾಪಕ ಕಾರ್ಯದರ್ಶಿ, ಮಹಾರಾಷ್ಟ್ರ ಲಿಂಗಾಯತ ಎಜುಕೇರ್ಷ ಸೊಸೈಟಿ)

ಪುಸ್ತಕ : "ವಚನ ಸಂಗಮ" (ಮರಾಠಿ ಆವೃತ್ತಿ)

ಪುಸ್ತಕ ದಾನಿಗಳಿಗೆ
ಸತ್ಕಾರ : ಶರಣೆ. ಅನ್ನಪೂರ್ಣ ದಾನಪ್ಪ ನಿಡಸೋಸಿ, ಸಂಕೇಶ್ವರ.

ಅತಿಥಿಗಳಿಂದ ಉಪನ್ಯಾಸಗಳು

* ಶರಣ. ಮಾರುತಿ ಶಿವರಾಂ.
(ಪ್ರಶಸ್ತಿವಿಜೇತ, ಚಲನಚಿತ್ರ ನಿರ್ದೇಶಕರು, ಬೆಂಗಳೂರು)

ವಿಷಯ : ಧರ್ಮ ಮತ್ತು ಮಾನವೀಯ ಮೌಲ್ಯಗಳು.

* ಶರಣ. ಕುಮಾರ ಕಕ್ಕಯ್ಯ ಪೋಳ.
(ಬಸವ ಧರ್ಮ ಸಂಸತ್ ಸದಸ್ಯರು, ಬಿಜಾಪುರ.)

ವಿಷಯ : ಬುದ್ಧ-ಬಸವ-ಅಂಬೇಡ್ಕರ್.

* ಶರಣ. ಸರ್ದಾರ್ ಹನುಮಾನ್ ಸಿಂಗ್,
(ಅಧ್ಯಕ್ಷರು, ಸಿಖ್ ಧರ್ಮ ಮಿರ್ಷ, ದಕ್ಷಿಣ ಭಾರತ)

ವಿಷಯ : ಸಿಖ್ ಧರ್ಮ ಮತ್ತು ಬಸವ ಧರ್ಮ

ಆಶೀರ್ವಚನ : ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು.
(ವಿಶ್ವಕಲ್ಯಾಣ ಮಿಷನ್, ಬೆಂಗಳೂರು)

ಶರಣ ಮೇಳ—ಶರಣೆಯರ ಗೋಷ್ಠಿ

ದಿ. 13-1-1991, ಭಾನುವಾರ. ವೇಳೆ : ಸಂಜೆ 7 ರಿಂದ

ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ.
(ಬಸವ ಧರ್ಮ ಪೀಠ, ಕೂಡಲ ಸಂಗಮ)

ಅಧ್ಯಕ್ಷತೆ : ಶರಣೆ. ಉಮಾದೇವಿ. ಡಿ. ಎಂ. ಚಂದ್ರಶೇಖರ್.
(ಅಧ್ಯಕ್ಷೆ, ಅಕ್ಕಮಹಾದೇವಿ ಸೇವಾ ಸಮಾಜ, ಬೆಂಗಳೂರು)

ಮುಖ್ಯ ಅತಿಥಿ : ಶರಣೆ ಗೌರಮ್ಮ ಎ. ಎಂ. ಬಸವೇಗೌಡರು.
(ಅಕ್ಕಮಹಾದೇವಿ ಸಮಾಜ, ಚಿಕ್ಕಮಗಳೂರು)

ಉಪನ್ಯಾಸ : ಶರಣೆ. ಜಯಮ್ಮ ಚಂದ್ರಪ್ಪ.
(ರಾಷ್ಟ್ರೀಯ ಬಸವ ದಳ, ಶಿವಮೊಗ್ಗ)
ಶರಣೆ : ಅನ್ನಪೂರ್ಣ. ಎಂ. ಎ. ಬಿ. ಎಡ್.
(ಉಪನ್ಯಾಸಕಿ, ಬೀದರ)
ಶರಣೆ. ಪುಷ್ಪ ಗುರುಬಸಪ್ಪ.
(ಸಂಘಟಕರು, ನೀಲಗಿರಿ ಜಿಲ್ಲೆ)

ಮಕ್ಕಳ ಗೋಷ್ಠಿ

ಪ್ರಾರ್ಥನೆ : ಕುಮಾರಿ ಬಸವಶ್ರೀ, ಬೆಂಗಳೂರು
ಸ್ವಾಗತ : ಕುಮಾರಿ ಶೋಭಾ, ಕೂಡಲ ಸಂಗಮ
ಉದ್ಘಾಟನೆ : ಕುಮಾರಿ ವಚನ ಸುಧಾ, ಚಿತ್ರದುರ್ಗ
ಮುಖ್ಯ ಅತಿಥಿ : ಕುಮಾರಿ ಸಕೀನಾ. ಎಂ. ಸನದಿ, ಬೆಳಗಾಂವ
ನೃತ್ಯಗಳು : ಕುಮಾರಿ ಶೃತಿ ಕೆ. ಎಂ. ಭಟ್, ಹಳ್ಯಾಳ
ಕುಮಾರಿಯರಾದ, ಶೀಲಾ, ವಾಣಿ, ಕಲ್ಪನಾ, ಶಿವಮೊಗ್ಗ
ಕುಮಾರಿ ಕೆ. ಎಂ. ರೋಹಿಣಿ ಹೇಮಯ್ಯಸ್ವಾಮಿ, ಕಂಪ್ಲಿ
ಕುಮಾರಿ ಸೌಮ್ಯ ವಿಶ್ವೇಶ್ವರಯ್ಯ, ಚಿಕ್ಕಬಳ್ಳಾಪುರ
ಕುಮಾರಿ ಆರತಿ ಅಡಿಕಿಹಾಳ, ಬಾಗಿಲಕೋಟೆ
ಉಪನ್ಯಾಸಗಳು : ಕುಮಾರಿ ಪುನೀತ ನಂಜುಂಡಪ್ಪ, ದಾವಣಗೆರೆ.
ಕುಮಾರಿ ಜ್ಯೋತಿ ಗಂಗಾಧರ, ಬಾಗಲಕೋಟೆ.
ಕುಮಾರಿ ಶೃತಿ. ಕೆ. ಎಂ. ಭಟ್, ಹಳ್ಯಾಳ.
ಸಮೂಹ ಗೀತೆ : ಅರ್ಚನಾ, ಶೋಭಾ, ಮುಕ್ತಾಯಕ್ಕ, ಗಂಗಾಂಬಿಕೆ, ಬಸವಶ್ರೀ, ಮಂಜುಳಾ.
(ಸರ್ವಜ್ಞಮೂರ್ತಿ ಅನಾಥಾಲಯ, ಕೂಡಲ ಸಂಗಮ)
ನಿರ್ದೇಶನ : ಸೋದರಿ ಉಮಾದೇವಿ,

ಶರಣ ಮೇಳ—ಬಸವ ಕ್ರಾಂತಿ ದಿನಾಚರಣೆ

ದಿ. 14-1-1991, ಸೋಮವಾರ.

ಬೆಳಿಗ್ಗೆ 9 ಗಂಟೆಗೆ ಶ್ರೀಬಸವೇಶ್ವರ ಐಕ್ಯ ಮಂಟಪದಲ್ಲಿ ಪೂಜೆ, ಪ್ರತಿಜ್ಞಾವಿಧಿ, ಪಾದಯಾತ್ರೆ, ಪಥ ಸಂಚಲನ, ವಚನ ವಾಙ್ಮಯ ಮೆರವಣಿಗೆ.

ಸಮುದಾಯ ಪ್ರಾರ್ಥನಾ ಸಭೆ **ಸಮಯ ಬೆಳಿಗ್ಗೆ 10-00**

ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು

ಪೂಜ್ಯ ಶ್ರೀ ನಿ. ಪ್ರ. ಚನ್ನಬಸವ ಮಹಾಸ್ವಾಮಿಗಳು

(ವಿರಕ್ತ ಮಠ, ಪಾಂಡೋಮಟ್ಟಿ)

ಪೂಜ್ಯ ಶ್ರೀ ನಿ.ಪ್ರ. ಶಿವಲಿಂಗಸ್ವಾಮಿಗಳು, ಹಾಸನ

ಪೂಜ್ಯ ಶ್ರೀ ಶಂಕರ ಶಿವಾಚಾರ್ಯ ಮಹಾಸ್ವಾಮಿಗಳು

(ಜಗದ್ಗುರು ವೀರಭಿಕ್ಷಾವರ್ತಿ ಮಠ, ಹುಬ್ಬಳ್ಳಿ)

ಉದ್ಘಾಟನೆ : ಶರಣ. ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ

(ಸಚಿವರು, ಸಣ್ಣ ನೀರಾವರಿ ಖಾತೆ, ಕರ್ನಾಟಕ ಸರ್ಕಾರ)

ಅಧ್ಯಕ್ಷತೆ : ಶರಣೆ. ಬಸವರಾಜೇಶ್ವರಿ.

(ಲೋಕಸಭಾ ಸದಸ್ಯೆ, ಬಳ್ಳಾರಿ)

ಮುಖ್ಯ ಅತಿಥಿ : ಶರಣೆ. ಸುಮನ್ ಶರತ್ ಕೋಲಾರ,

(ಜಿಲ್ಲಾ ಪರಿಷತ್ ಉಪಾಧ್ಯಕ್ಷೆ, ಬಿಜಾಪುರ)

ಸಮುದಾಯ ಪ್ರಾರ್ಥನಾ ನಿರ್ವಹಣೆ

೧. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಕೂಡಲ ಸಂಗಮ
೨. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು, ಬೆಂಗಳೂರು
೩. ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರು
೪. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ, ಧಾರವಾಡ
೫. ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಹಿರೇಮಠ, ಭಾಲ್ಕಿ
೬. ಶರಣ ಶ್ರೀ ನಿಜಗುಣಾನಂದ ಸ್ವಾಮಿ, ಕೂಡಲ ಸಂಗಮ

ವಿಶೇಷ ಅತಿಥಿಗಳು :

ಶರಣ. ಎ.ಎಂ. ಬಸವೇಗೌಡರು (ಮಾಜಿ ಶಾಸಕರು ಮತ್ತು ದಾನಿಗಳು)
ಶರಣ. ಎಂ. ಕೆ. ಮಲ್ಲಯ್ಯ ರಾಜ್, (ರಫ್ತುದಾರರು, ಭವಾನಿ, ತಮಿಳುನಾಡು)
ಶರಣ. ಗಡಿಗೆಪ್ಪ ದೇಶನೂರು, ದಾನಿಗಳು, ಬೈಲಹೊಂಗಲ.
ಶರಣ. ಆರ್. ಬಿ. ಹೆಬ್ಬಳ್ಳಿ, ಉದ್ದಿಮೆದಾರರು, ಮುಂಬಯಿ.
ಶರಣ. ಮಲ್ಲಿಕಾರ್ಜುನಪ್ಪ ಪಟ್ಟಣಶೆಟ್ಟಿ, ಶಾಸಕರು, ಬಾದಾಮಿ.
ಶರಣ. ಮಲ್ಲಿಕಾರ್ಜುನಪ್ಪ ದಿವಟರ, ಶಾಸಕರು, ಕೊಪ್ಪಳ,
ಶರಣ. ಬಸವರಾಜ ಪಾಟೀಲ, ಅಟ್ಟೂರು, ಶಾಸಕರು, ಬಸವಕಲ್ಯಾಣ

ಶರಣ ಮೇಳ-ಧರ್ಮ ಚಿಂತನ ಗೋಷ್ಠಿ

ದಿ. 14-1-1991, ಸೋಮವಾರ **ಸಂಜೆ : 4-00 ರಿಂದ 7-30**

ಸನ್ನಿಧಿ : ಪೂಜ್ಯ ಶ್ರೀ ಶಂಕರ ಶಿವಾಚಾರ್ಯ ಮಹಾಸ್ವಾಮಿಗಳವರು.

(ಜಗದ್ಗುರು ಶ್ರೀ ವೀರಭಿಕ್ಷಾವರ್ತಿ (ನೀಲಕಂಠ ಮಠ, ಹುಬ್ಬಳ್ಳಿ)

ಅಧ್ಯಕ್ಷತೆ : ಪೂಜ್ಯರಾದ ಶ್ರೀ ನಿ. ಪ್ರ. ಶಿವಲಿಂಗಸ್ವಾಮಿಗಳು.

(ತಣ್ಣೀರು ಹಳ್ಳಮಠ, ಹಾಸನ)

ಉದ್ಘಾಟನೆ : ಶರಣ. ಎ. ಎಂ. ಬಸವೇಗೌಡರು.

(ಮಾಜಿ ಶಾಸಕರು, ಚಿಕ್ಕಮಗಳೂರು)

ಉಪನ್ಯಾಸ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

(ಬಸವ ಧರ್ಮ ಪೀಠ, ಕೂಡಲ ಸಂಗಮ)

ಉಪನ್ಯಾಸಗಳು : ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ.

(ವಿಶ್ವಕಲ್ಯಾಣ ಮಿಷನ್, ಬೆಂಗಳೂರು.)

ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು.

(ಹಿರೇಮಠ ಸಂಸ್ಥಾನ, ಭಾಲ್ಕಿ)

ಶಿವಶ್ರೀ ನಾಗಲಿಂಗ ಶಿವಯೋಗಿಗಳು.

(ಅಧ್ಯಕ್ಷರು, ವಿಶ್ವ ಲಿಂಗಾಯತ ಪರಿಷತ್, ಆಂಧ್ರಪ್ರದೇಶ)

ಪುಸ್ತಕ ಬಿಡುಗಡೆ : ಪರ್ವತಪ್ಪ ಕೋರವಾರ

(ಅ.ಭಾ.ವೀ. ಮಹಾಸಭೆ, ಆಂಧ್ರಪ್ರದೇಶ)

ಪುಸ್ತಕ : "ವಚನ ಸಂಗಮ" (ತೆಲುಗು ಆವೃತ್ತಿ)

ಪುಸ್ತಕ ಬಿಡುಗಡೆ : ಶರಣ. ಎಂ. ಕೆ. ಮಲ್ಲಯ್ಯರಾಜ್.

(ಭವಾನಿ, ತಮಿಳುನಾಡು)

ಪುಸ್ತಕ : "ವಚನ ಸಂಗಮ" (ತಮಿಳು ಆವೃತ್ತಿ)

ಉಪನ್ಯಾಸಗಳು : ಶರಣ. ರಾಜೇಂದ್ರ ಜಿರೋಬೆ.

(ರಿಜಿಸ್ಟ್ರಾರ್, ಉದಯಗಿರಿ ಕಾಲೇಜ್, ಉದಗೀರ್)

ಶರಣ. ಎಂ. ಎಂ. ಹಿರೇಮಠ.

(ಉಪನ್ಯಾಸಕರು, ಮ್ಯೆಂದರಗಿ, ಮಹಾರಾಷ್ಟ್ರ)

ಶರಣ. ಡಾ॥ ಹಾಲೂದೆರೈ.

(ನೀಲಾಂಬಿಕಾ ಕ್ಲಿನಿಕ್, ಕೊಯಮತ್ತೂರು)

ಸಮಾರೋಪದ ಆಶೀರ್ವಚನ } ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು.

(ವಿಶ್ವಕಲ್ಯಾಣ ಮಿಷನ್, ಬೆಂಗಳೂರು)

ಶರಣ ಮೇಳ - ಸಾಂಸ್ಕೃತಿಕ ಕಾರ್ಯಕ್ರಮ

ದಿ. 14-1-1991, ಸೋಮವಾರ **ರಾತ್ರಿ 7-30**

ಕಾರ್ತಿಕೇಯ ಕಲಾಕೇಂದ್ರದ ಬೆಂಗಳೂರಿನ ಬಾಲಕಿ ಕುಮಾರಿ ಶೃತಿ ಆನಂದಳು ಅಮೋಘವಾದ ನೃತ್ಯ ಪ್ರದರ್ಶನ ನೀಡಲಿದ್ದಾಳೆ. ಕೇವಲ ಎಂಟುವರ್ಷದ ಬಾಲಕಿಯಾದ ಶೃತಿ ನರ್ತಕಿಯಾಗಿ ರಂಗ ಪ್ರವೇಶ ಮಾಡಿದ ಅತ್ಯಂತ ಕಿರಿಯ ಕಲಾವಿದೆ ಎಂಬ ಖ್ಯಾತಿಗೆ ಪಾತ್ರಳಾಗಿದ್ದಾಳೆ. ಸುಪ್ರಸಿದ್ಧ ನೃತ್ಯ ಶಿಕ್ಷಕಿ ಶ್ರೀಮತಿ ಉಷಾ ದಾತಾರ್‌ರವರ ಶಿಷ್ಯೆಯಾದ ಶೃತಿ ಭರತ ನಾಟ್ಯ, ಶಿವ ಸ್ತುತಿ, ಮೋಹಿನಿ ಆಟ್ಟಂ, ವಚನಾಭಿನಯಗಳನ್ನು 2 ಗಂಟೆಯ ಕಾಲ ಪ್ರದರ್ಶಿಸಲಿದ್ದಾಳೆ.

ಸಂಗೀತ ಪ್ರವಚನ **ರಾತ್ರಿ 10-00ಗಂಟೆ**

ಶರಣ ಎಸ್. ಎಸ್. ಬೀಳಗಿ ಎಂ.ಎಸ್‌ಸಿ.
(ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ)

ವಿಷಯ : ಶರಣರು ಬೋಧಿಸಿದ ಜೀವನ ಮೌಲ್ಯಗಳು

ಶರಣ ಮ. ನ. ಬೊಮ್ಮಲಿಂಗಪ್ಪ ಮತ್ತು
ಶರಣ ಜಿ. ಟಿ. ಬಸವರಾಜಪ್ಪ

ವಿಷಯ : ಜಾನಪದ ಸಾಹಿತ್ಯದಲ್ಲಿ ಶರಣರು

ಸಾಮೂಹಿಕ ಇಷ್ಟಲಿಂಗ ಪೂಜೆ

ದಿ. 15-1-1991, ಮಂಗಳವಾರ **ಬೆಳಿಗ್ಗೆ 7**

ಅನೇಕ ಪೂಜನೀಯರಾದ ಮಠಾಧಿಕಾರಿಗಳ, ಗಣ್ಯರ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ–ಮಂತ್ರಜಪಗಳು ನೆರವೇರಲಿವೆ.

ನಿರೂಪಣೆ : **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**

ಇದರಲ್ಲಿ ಜನರು ಪಾಲ್ಗೊಂಡು ಪೂಜೆಯನ್ನು ಮಾಡಲಿರುವರು.

ಶರಣ ಬಂಧುಗಳಿಗೆ ಸೂಚನೆ

1. ಅಕ್ಕಮಹಾದೇವಿ 'ಶಿವಯೋಗ ಮಂಟಪ'ದಲ್ಲಿ ಮೌನವಾಗಿ, ಇಷ್ಟಲಿಂಗಪೂಜೆ ಧ್ಯಾನಾದಿಗಳನ್ನು ಪೂರೈಸಿಕೊಳ್ಳಬೇಕೆನ್ನುವವರು, ಮತ್ತು ಶ್ರೀ ಗುರು ಬಸವಣ್ಣನವರ ಪೂಜೆಯನ್ನು ತಾವೇ ಸ್ವತಃ ಮಾಡಬೇಕೆನ್ನುವವರು ಬೆಳಗಿನ ಜಾವದಲ್ಲೇ ಮಿಂದು ಮಡಿಯುಟ್ಟು ಪೂಜೆಗೆ ಬರಬೇಕು.
2. ಬೆಳಗಿನ 7-30 ರಿಂದ ಸಾರ್ವಜನಿಕರೆಲ್ಲರಿಗೂ ದರ್ಶನಾವಕಾಶ ದೊರೆಯುವುದು.
3. ಬಸವ ಮುದ್ರೆಗಳು, ನಾಣ್ಯಗಳು, ವಿಭೂತಿ, ಕುಸುರೆಳ್ಳು ಮುಂತಾದುವು ಪ್ರಸಾದ ರೂಪದಲ್ಲಿ ಒಯ್ಯಲು ಲಭ್ಯವಿರುತ್ತವೆ.
4. ಪೂಜಾ ಮಂಟಪದೊಳಗೆ ತೆಂಗಿನಕಾಯಿ ಒಡೆಯಲು ಅವಕಾಶ ಇರುವುದಿಲ್ಲ. ಸದ್ಭಕ್ತರು ಹೊರಗಡೆಯೇ ಒಡೆದು ತಂದು, ನೈವೇದ್ಯ ಮಾಡಿಸಿಕೊಂಡು, ತೀರ್ಥ ಪ್ರಸಾದ ಪಡೆದುಕೊಳ್ಳಬೇಕು.

ರಾಷ್ಟ್ರೀಯ ಬಸವ ದಳಗಳ ನಾಲ್ಕನೆಯ ಮಹಾಧಿವೇಶನ ಮತ್ತು ಶರಣ ಮೇಳ—ಸಮಾರೋಪ ಸಮಾರಂಭ

ದಿ. 15-1-1991, ಮಂಗಳವಾರ. **ಬೆಳಿಗ್ಗೆ 10-30 ಕ್ಕೆ**

ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು.
(ಗೌರವಾಧ್ಯಕ್ಷರು, ಬಸವ ಧರ್ಮಪೀಠ, ಕೂಡಲಸಂಗಮ)

ಉದ್ಘಾಟನೆ : ಶರಣ. ಬಸವರಾಜ ಪಾಟೀಲ ಅನ್ವರಿ.
(ಕೇಂದ್ರ ಸಚಿವರು, ಉಕ್ಕು ಮತ್ತು ಗಣಿ ಖಾತೆ)

ಮುಖ್ಯ ಅತಿಥಿ : ಶರಣ. ಆರ್. ಬಿ. ಹೆಬ್ಬಳ್ಳಿ, ಮುಂಬಯಿ.
(ಉದ್ದಿಮೆದಾರರು, ಕಾಂಟ್ರ್ಯಾಕ್ಟರ್ಸ್, ಚಲನ ಚಿತ್ರ ನಿರ್ಮಾಪಕರು)

ಪ್ರಾಸ್ತಾವಿಕ ಭಾಷಣ ; ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಅಧ್ಯಕ್ಷತೆ : ಪೂಜ್ಯ ಶ್ರೀ ಸಿದ್ಧರಾಮೇಶ್ವರ ಶರಣರು.
(ಬಸವ ಮಹಾಮನೆ, ಬಸವ ಕಲ್ಯಾಣ)

ಭಾಗ-೧. ಮಹನೀಯರಿಗೆ ಸತ್ಕಾರ

೧. ಶರಣ. ಎಂ. ಕೆ. ಮಲ್ಲಯ್ಯರಾಜ್. (ರಫ್ತುದಾರರು, ಭವಾನಿ, ತಮಿಳುನಾಡು)
೨. ಶರಣ. ಡಾ॥ ಎನ್. ಪ್ರಭುದೇವ. (ಹೃದಯ ರೋಗ ತಜ್ಞರು, ಬೆಂಗಳೂರು)
೩. ಶರಣ. ಡಾ॥ ಸಿ. ಮುನಿಚೂಡಪ್ಪ.
(ಸುಪ್ರಸಿದ್ಧ ಮಧುಮೇಹ ತಜ್ಞರು, ಬೆಂಗಳೂರು)
೪. ಶರಣೆ. ಡಾ॥ ಲೀಲಾ ಮುನಿಚೂಡಪ್ಪ ಬೆಂಗಳೂರು.
೫. ಶರಣ. ಎ. ಎಂ. ಬಸವೇಗೌಡರು.
(ದಾನಿಗಳು ಮತ್ತು ಮುಂದಾಳು, ಚಿಕ್ಕಮಗಳೂರು)
೬. ಶರಣೆ. ಉಮಾದೇವಿ. ಎಂ. ಟೋಪಣ್ಣನವರು.
(ಸಂಪಾದಕರು, ಕನ್ನಡಮ್ಮ ದಿನಪತ್ರಿಕೆ, ಬೆಳಗಾಂವ)
೭. ಶರಣ. ಸಂಗಮೇಶ ಹೊಸಮನಿ. (ಸಾಹಿತಿಗಳು, ಹುನಗುಂದ)
೮. ಶರಣ. ಡಾ॥ ಮುದಿಗೊಂಡ ಶಿವಪ್ರಸಾದ ಮತ್ತು ಡಾ॥ ಉಮಾದೇವಿ.
(ಖ್ಯಾತ ಸಾಹಿತಿಗಳು, ಹೈದರಾಬಾದ್, ಆಂಧ್ರಪ್ರದೇಶ)
೯. ಶರಣ. ಬಿ. ಎಂ. ಹೊರಕೇರಿ. (ನಿಸ್ಪೃಹ ಜನ ಸೇವಕರು, ಬಾದಾಮಿ)
೧೦. ಶರಣ. ಸಿಸು ಸಂಗಮೇಶ. (ಮಕ್ಕಳ ಸಾಹಿತಿಗಳು, ಬಿಜಾಪುರ)
೧೧. ಶರಣ. ರಾಜೇಂದ್ರ ಜಿರೋಬೆ. (ರಿಜಿಸ್ಟ್ರಾರ್, ಉದಯಗಿರಿ ಕಾಲೇಜ್, ಉದ್ಗೀರ್)
೧೨. ಶರಣ. ಚಂದ್ರಪ್ಪಾಜಿ ಅರಸ್.
(ಸರ್ವೋದಯ ಸಾಧಕ, ಕಾಯಕಯೋಗಿ, ಬ್ರಹ್ಮಸಂದ್ರ)
೧೩. ಶರಣ. ಜಿ. ಎಂ. ತುಪ್ಪದ.
(ಸಂಸ್ಥಾಪಕರು, ಶ್ರೀ ಸಂಗಮೇಶ್ವರ ಮಾಧ್ಯಮಿಕ ಶಾಲೆ, ಕೂಡಲಸಂಗಮ)

ಸಂಘಟನೆ ಕುರಿತು ಉಪನ್ಯಾಸಗಳು

ಶರಣೆಯರುಗಳಿಂದ,

1. **ಪೂಜ್ಯ ಶ್ರೀ ಮಹಾನಂದಾ ತಾಯಿ ಹಿರೇಮಠ, ಮುಗಳಿ.**
   (ಅನುಭವ ಮಂಟಪ, ಮುಗಳಿ, ಮಹಾರಾಷ್ಟ್ರ)
2. **ಶರಣೆ. ಶಾರದಾ ತಾಯಿ ಭೀಮಲಿಂಗನಗೌಡ.**
   (ರಾಷ್ಟ್ರೀಯ ಬಸವ ದಳ, ಬಳ್ಳಾರಿ)
3. **ಶರಣೆ. ಸರೋಜಾ ಎಂ. ನಾಗರಾಜು.**
   (ರಾಷ್ಟ್ರೀಯ ಬಸವ ದಳ, ಮೈಸೂರು)

ಶರಣರುಗಳಿಂದ

1. **ಶರಣ. ಬಸವ ಕುಮಾರ್ ಪಾಟೀಲ್**
   (ರಾಷ್ಟ್ರೀಯ ಬಸವ ದಳ, ಬೀದರ)
2. **ಶರಣ. ಗುರುಬಸಪ್ಪ, ಕಾಟೇರಿ.**
   (ರಾಷ್ಟ್ರೀಯ ಬಸವ ದಳ, ಕಾಟೇರಿ, ನೀಲಗಿರಿ ಜಿಲ್ಲೆ)
3. **ಶರಣ. ಮ. ನ. ಬೊಮ್ಮಲಿಂಗಪ್ಪ,**
   (ಜಾನಪದ ಪ್ರವಚನಕಾರರು, ಮತ್ತೋಡು)
4. **ಶರಣ. ಪಚ್ಚೂರು ನಾಗಪ್ಪ,**
   (ರಾಷ್ಟ್ರೀಯ ಬಸವ ದಳ, ಪಚ್ಚೂರು, ತಮಿಳುನಾಡು)
5. **ಶರಣ. ವಿಜಯಕುಮಾರ್, ಶಿವಮೊಗ್ಗ,**
   (ರಾಷ್ಟ್ರೀಯ ಬಸವ ದಳ, ಶಿವಮೊಗ್ಗ)
6. **ಶರಣ. ಎಸ್. ಲಿಂಗಣ್ಣ, ನಿವೃತ್ತ ಬಿ. ಡಿ. ಓ.**
   (ರಾಷ್ಟ್ರೀಯ ಬಸವ ದಳ, ಚಿತ್ರದುರ್ಗ)
7. **ಶರಣ. ಡಾ|| ಶಿವಗೌಡ ಪಾಟೀಲ,**
   (ರಾಷ್ಟ್ರೀಯ ಬಸವ ದಳ, ಸಂಕೇಶ್ವರ)

ಸ್ವಾಗತ ಮತ್ತು ಸಭಾನಿರ್ವಹಣೆ } ಶರಣ. ಪುಟ್ಟರುದ್ರಪ್ಪ, ಬೆಂಗಳೂರು

ಮಹತ್ವಪೂರ್ಣ ನಿರ್ಣಯುಗಳು—ಘೋಷಣೆ

ಮಂಡನೆ : **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
(ಕಾರ್ಯಾಧ್ಯಕ್ಷೆ, ಬಸವ ಧರ್ಮ ಸಂಸತ್)

ಅನುಮೋದನೆ : **ಶರಣ ಸಮುದಾಯದಿಂದ**

ಘೋಷಣೆ : **ಶರಣ ಸಮುದಾಯದ ಎದುರಿಗೆ**

ವಿಶೇಷ ಸೂಚನೆ : ಈ ವೇದಿಕೆಯ ಮೇಲೆ ಮುಕ್ತ ಚರ್ಚೆಗೆ ಅವಕಾಶ ಇರುವುದಿಲ್ಲವೆಂದು ಪ್ರಸ್ತುತ ಸಭೆಯಲ್ಲಿ ಘೋಷಿಸಲಾಗುವ ವಿಷಯಗಳನ್ನು ದಿ. 12-1-1991 ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಬಸವ ಧರ್ಮ ಸಂಸತ್ ಸಭೆಯಲ್ಲೇ ಚರ್ಚಿಸಲಾಗುವುದು. ಈ ಚರ್ಚಾ ಗೋಷ್ಠಿಯಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶ ಇರುವುದರಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆನ್ನುವ ಶರಣರು ಈ ಗೋಷ್ಠಿಯಲ್ಲಿ ಭಾಗವಹಿಸಬೇಕು.

ಶರಣ ಮೇಳ-ಕೆಲವು ವಿಶೇಷ ವಿವರಗಳು

- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಜಿಲ್ಲಾ ಕೇಂದ್ರ ಮತ್ತು ತಾಲ್ಲೋಕು ಕೇಂದ್ರಗಳಿಂದ ಬಸ್ಸುಗಳನ್ನು ಕೂಡಲ ಸಂಗಮದ ಯಾತ್ರಾರ್ಥಿಗಳಿಗಾಗಿ ಏರ್ಪಡಿಸಿದ್ದಾರೆ. (ಕ. ರಾ. ರ. ಸಾ. ಸಂಸ್ಥೆ ಕೇಂದ್ರ ಕಛೇರಿ ಆದೇಶ ಸಂಖ್ಯೆ 8235/90-91 ದಿ. 21-11-90) ಆದ್ದರಿಂದ ಸಂಬಂಧಪಟ್ಟ ವಲಯಗಳ ಡಿಪೋಮ್ಯಾನೇಜರನ್ನು ಕಂಡು ರಿಸರ್ವೇಶನ್‌ಗಾಗಿ ಕೇಳಿರಿ.
- ಯಾವುದೇ ಕಡೆಯಿಂದ ಬರುವ ಪ್ರಯಾಣಿಕರಿಗೆ ಹುನಗುಂದ, ಇಳಕಲ್, ಬಾಗಿಲುಕೋಟೆ, ಬಿಜಾಪುರಗಳಿಂದ ಸಂಪರ್ಕ ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಬಾಗಿಲುಕೋಟೆಗೆ ರೇಲ್ವೆ ಮುಖಾಂತರ ಎರಡೂ ದಿಕ್ಕಿನಿಂದ ಬರುವ ಯಾತ್ರಾರ್ಥಿಗಳಿಗೆ ರೇಲ್ವೆ ನಿಲ್ದಾಣದಲ್ಲಿ ಬಸ್ ವ್ಯವಸ್ಥೆ ಮಾಡಲಾಗುತ್ತಿದ್ದು ಇಳಿದವರು ನೇರವಾಗಿ ಕೂಡಲ ಸಂಗಮಕ್ಕೆ ಬರಬಹುದು.
- ಕೂಡಲಸಂಗಮದಲ್ಲಿ ವಸತಿಗಾಗಿ ಶಾಮಿಯಾನ ಕೋಣೆಗಳ ವ್ಯವಸ್ಥೆ ಇದೆ. ಬಂದವರು ವಿಚಾರಣಾ ಕೇಂದ್ರದಲ್ಲಿ ಮಾಹಿತಿ ಪಡೆದು ವಸತಿಯ ಸೌಲಭ್ಯ ಪಡೆಯಬಹುದು. 50 ರೂ. ಪ್ರತಿನಿಧಿ ಶುಲ್ಕ, 100 ರೂ. ಸದಸ್ಯತ್ವ ಶುಲ್ಕ ; 100 ರೂ ಮತ್ತು ಹೆಚ್ಚು ಕಾಣಿಕೆ ಕೊಟ್ಟವರಿಗೆ ಮತ್ತು ಆಹ್ವಾನಿತರಿಗೆ ಊಟ-ವಸತಿಯ ವ್ಯವಸ್ಥೆಯನ್ನು ಸಮಿತಿಯು ಮಾಡುತ್ತದೆ.
- ಉಚಿತ ದಾಸೋಹದ ಸೌಲಭ್ಯವು ಇದೆ. ಆದರೆ ಒಂದು ಶಿಸ್ತು ಕಾಪಾಡಲೋಸುಗ ಉಚಿತ ದಾಸೋಹದ ಸೌಲಭ್ಯ ಬೇಕಾದವರು ಸಹ ಕಾರ್ಯಾಲಯದಲ್ಲಿ ತಮ್ಮ ವಿವರ ನೀಡಿ ಗುರುತಿನ ಚೀಟಿ (ಬ್ಯಾಡ್ಜ್) ಪಡೆದುಕೊಳ್ಳಿರಿ.
- ಸಾರ್ವಜನಿಕ ಕಾರ್ಯಕ್ರಮಗಳು 15-1-1991 ರಂದು ಮಧ್ಯಾಹ್ನ 3 ಗಂಟೆಗೆ ಮುಕ್ತಾಯಗೊಳ್ಳುವ ಕಾರಣ, ಅನಂತರ ಶರಣ ಬಂಧುಗಳು ತಮ್ಮ ತಮ್ಮ ಊರುಗಳಿಗೆ ಹಿಂದಿರುಗಬಹುದು.
- ಕೇವಲ ಉತ್ಸವ ಸಮಿತಿಯ ಪದಾಧಿಕಾರಿಗಳು ಮತ್ತು ಮುಂದೆ ಸಂಘಟನೆ ಮಾಡಬೇಕೆನ್ನುವ ಉತ್ಸಾಹಿಗಳು-ಮುಖಂಡರು ಉಳಿದುಕೊಳ್ಳಬೇಕು. ಈ ಬಗ್ಗೆ ವಿಶೇಷ ಕಾರ್ಯಕರ್ತರ ಸಭೆಯು 16-1.1991 ರಂದು ಸಂಜೆ 6 ರಿಂದ ಮಹಾಮನೆ ಆವರಣದಲ್ಲಿ ನಡೆಯಲಿರುವುದು.
- 16-1-1991 ಮಂಗಳವಾರ ಬೆಳಿಗ್ಗೆ 8 ಗಂಟೆಗೆ ವಿಶೇಷ ಪೂಜೆ, ಅಖಂಡ ವಚನ ಪಠಣ ಮುಕ್ತಾಯ, ಮಹಾಮಂಗಲ, ಧ್ವಜಾವರೋಹಣ ಕಾರ್ಯಕ್ರಮ.
- ಅನೇಕ ಸದ್ಭಕ್ತರು ದೀಕ್ಷೆಯನ್ನು ಪಡೆದುಕೊಳ್ಳಲು ಬಯಸಿ ಪತ್ರ ಬರೆದಿರುವುದರಿಂದ 16-1.1991 ರಂದು ಬೆಳಿಗ್ಗೆ 9 ಗಂಟೆಗೆ ದೀಕ್ಷಾ ಸಂಸ್ಕಾರ ನೀಡಲಾಗುವುದು. ಮಂತ್ರದೀಕ್ಷೆ, ಲಿಂಗದೀಕ್ಷೆ ಪಡೆಯಲಿಚ್ಛಿಸುವ ಉಭಯತರೂ ಮೊದಲೇ ತಿಳಿಸಬಹುದು.

ಕೂಡಲ ಸಂಗಮದಲ್ಲಿ ಸಂದರ್ಶಿಸಬೇಕಾದ ಸ್ಥಳಗಳು

★ **ಸಂಗಮೇಶ್ವರ ದೇವಾಲಯ :** ಚಾರಿತ್ರಿಕ, ಪುರಾತನ, ಶಿವ ದೇವಾಲಯ.

★ **ಬಸವೇಶ್ವರ ಐಕ್ಯ ಮಂಟಪ :** ಗುರು ಬಸವಣ್ಣನವರ ದಿವ್ಯ ಸಮಾಧಿ.

★ **ಬಸವ ಸಾಗರ :** ಕೃಷ್ಣ-ಮಲಾಪಹಾರಿ ನದಿಗಳ ಸಂಗಮದಿಂದ ರೂಪುಗೊಂಡಿರುವ ಸುಂದರ ಜಲರಾಶಿ.

★ **ಅಖಂಡ ವಚನ ಪಠಣ ಮಂಟಪ :**
ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ದಿನಾಂಕ 9–1–1991 ರಿಂದ 16–1–91ರ ವರೆಗೆ ಅಖಂಡ ವಚನ ಪಠಣ ನಡೆಯುತ್ತಿರುವ ಮಂಟಪ, ಮತ್ತು 16 ಜನ ಶರಣರ ಸುಂದರ ಮೂರ್ತಿಗಳು.

★ **ಶ್ರೀ ಬಸವೇಶ್ವರ ಪೂಜಾಮಂಟಪ :** ಮಹಾಮನೆಯ ಆವರಣದಲ್ಲಿರುವ ಇಲ್ಲಿಗೆ ಬಂದು ಪೂಜೆ ಮಾಡಿಸಿ, ದರ್ಶನ ಪಡೆದು, ಪ್ರಸಾದವನ್ನು ಪಡೆಯಿರಿ.

★ **ಬಸವ ಮುದ್ರೆ ಮತ್ತು ನಾಣ್ಯ :** ಪೂಜ್ಯ ಗುರು ಬಸವಣ್ಣನವರ ಚಿತ್ರ, ಷಟ್ಕೋನ, ಬಸವ ಮಂತ್ರ–ಪಾದಪೀಠ ಸಹಿತ ಇರುವ ಮುದ್ರೆಗಳು ದೊರೆಯುತ್ತವೆ.

ಮುದ್ರೆ : ಚಿಕ್ಕ ಗಾತ್ರದವು 12 ರೂ. ಪ್ಲಾಸ್ಟಿಕ್ ಡಬ್ಬಿ ಸಹಿತ 15 ರೂ.
ದೊಡ್ಡ ಗಾತ್ರದವು 20 ರೂ. ,, 24 ರೂ.

ನಾಣ್ಯ : ತಾಮ್ರ ವರ್ಣ ರೂ 14, ಬೆಳ್ಳಿಯ ವರ್ಣ 15, ಬಂಗಾರದ ವರ್ಣ 16.
ಡಬ್ಬಿ ಬೇಕಾದರೆ 3 ರೂ. ಬೇರೆ ಕೊಡಬೇಕು.

★ **ನೀಲಾಂಬಿಕಾ ಐಕ್ಯ ಮಂಟಪ :** ನೀಲಾಂಬಿಕಾ ತಾಯಿಯ ಸಮಾಧಿಯು ಕೃಷ್ಣಾ ನದಿಯ ಇನ್ನೊಂದು ಬದಿಗೆ, ತಂಗಡಗಿ ಗ್ರಾಮದ ಬಳಿ ಇದ್ದು ಅತ್ಯಂತ ಸುಂದರ ಪರಿಸರದಲ್ಲಿದೆ. ದೋಣಿಯಲ್ಲಿ ಕುಳಿತು ಪಯಣಿಸಲು ಅವಕಾಶವುಂಟು. ಮಲಪ್ರಭಾ ನದಿಯನ್ನು ದೋಣಿಯಲ್ಲಿ ದಾಟಿ ಬಸ್ಸುಗಳಲ್ಲಿಯೂ ಹೋಗಬಹುದು. ಅಥವಾ ಬಸ್ಸು, ಕಾರುಗಳ ಮೂಲಕ ಬೆಳಗಲ್ ಮಾರ್ಗವಾಗಿ ಹೋಗಬಹುದು. ಕೂಡಲ ಸಂಗಮದಿಂದ ವಿಶೇಷ ಬಸ್ಸುಗಳಿರುತ್ತವೆ.

—ಸೂಚನೆಗಳು—

ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ಶರಣ ಮೇಳ ಉತ್ಸವ ಸಮಿತಿಯ ಕಾರ್ಯಾಲಯ ಮತ್ತು ಸಮಾಚಾರ ಕೇಂದ್ರಗಳಿವೆ. ಪ್ರತಿನಿಧಿಗಳು ತಮ್ಮ ತಮ್ಮ ರಸೀತಿಗಳನ್ನು ತೋರಿಸಿ ಬ್ಯಾಡ್ಜಸ್ (ಗುರುತಿನ ಚೀಟಿ), ಪ್ರಸಾದ ನಿಲಯ ಪ್ರವೇಶ ಚೀಟಿ ಮುಂತಾದುವನ್ನು ಪಡೆಯಬೇಕು.

ಕಾಣಿಕೆ ಸಂಗ್ರಹಿಸಲು ರಸೀತಿ ಪುಸ್ತಕ ಪಡೆದವರು ತಾವು ಸಂಗ್ರಹಿಸಿದ ಕಾಣಿಕೆ ಮತ್ತು ರಸೀತಿ ಪುಸ್ತಕಗಳನ್ನು ಕಾರ್ಯಾಲಯದಲ್ಲಿ ಇರುವ ಕೋಶಾಧ್ಯಕ್ಷೆ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್ ಪುಟ್ಟರುದ್ರಪ್ಪ ಅವರಿಗೆ ಒಪ್ಪಿಸಿ, ಅವರ ಸಹಿ ಇರುವ ಪಾವತಿ ಪಡೆಯಬೇಕು.

ಶರಣ ಮೇಳ ಕುರಿತು ಮತ್ತಷ್ಟು ವಿವರ

೧. 1991 ರ ನೂತನ ವರ್ಷದ ಕ್ಯಾಲೆಂಡರ್, ಭಕ್ತಿಶ್ರೀ, ಬಸವ ಚಂದ್ರಿಕೆ, ಶರಣ ಸೌರಭ ಇತ್ಯಾದಿ ಪೂಜ್ಯ ಮಾತಾಜಿಯವರು ಬರೆದ ಭಕ್ತಿಗೀತೆಗಳ ಕೆಸೆಟ್ಟು, "ಬಸವ ಭಾನು" ಎನ್ನುವ ಬಸವಣ್ಣನವರ ಸಮಗ್ರ ಜೀವನ ಚರಿತ್ರೆ ಕುರಿತಾದ ಹಾಡಿನ ಕೆಸೆಟ್ಟು ಬಿಡುಗಡೆಯಾಗಿದ್ದು, ಮಾರಾಟಕ್ಕೆ ಲಭ್ಯವಾಗಲಿವೆ.

೨. ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕಾದವರು ಹೊದ್ದುಕೊಳ್ಳಲು, ಷಟ್‌ಕೋನ ಸಹಿತವಾದ ಮೇಲುವಸ್ತ್ರ (ಸ್ಕಾರ್ಫ್)ಇದೆ. 10 ರೂ. ಗಳಿಗೊಂದರಂತೆ ಲಭ್ಯವಿರುವ ಇವನ್ನು ತಪ್ಪದೇ ಖರೀದಿಸಿ ಉಪಯೋಗಿಸಬೇಕು. ಬಸವಣ್ಣನವರ ಭಾವಚಿತ್ರ 4 ಮೂಲೆ ಚಿತ್ರಗಳೊಡನೆ ಇರುವ ಪೂಜಾವಸ್ತ್ರದ ಬೆಲೆ 50 ರೂ. ನಿತ್ಯಪೂಜೆಯ ಕಾಲದಲ್ಲಿ ಹೊದೆಯಲು ಚೆನ್ನಾಗಿರುವುದು. ಮಹಾಮನೆ ಆವರಣ, ಸಭಾ ಮಂಟಪ ಎರಡೂ ಕಡೆ ಇವು ದೊರೆಯುತ್ತವೆ.

೩. ಶರಣ ಮೇಳದಲ್ಲಿ ಭಾಗಿಗಳಾದವರು ಮನೆಗೆ "ಬಸವ ಪ್ರಸಾದ" ವಾಗಿ ಒಯ್ಯಲು "ಲಾಡು" ಮತ್ತು ಕುಸುರೆಳ್ಳಿನ ಪೊಟ್ಟಣ ಮಾರಾಟಕ್ಕಿವೆ. ಸಭಾಮಂಟಪದ ಬಳಿ ಇರುವ ಸ್ಟಾಲಲ್ಲಿ ಅವು ದೊರೆಯುತ್ತವೆ.

೪. ಪ್ರಾರ್ಥನಾ ನಂತರ ಶರಣ ಬಂಧುಗಳು ಪರಸ್ಪರ ಸಹೋದರ ಭಾವನೆಯಿಂದ ಧರಿಸಿಕೊಳ್ಳಲು 'ಬಸವ ರಕ್ಷೆ' [ರಾಖಿ] ಗಳನ್ನು ಸಿದ್ಧಪಡಿಸಲಾಗಿದೆ. ಅವುಗಳ ಬೆಲೆ ೧-೨೫ ಪೈ ಮತ್ತು ೧-೫೦ ಪೈ. ಅವನ್ನು ಖರೀದಿಸಿ ಇಟ್ಟುಕೊಳ್ಳಬೇಕು.

೫. ಸಮುದಾಯ ಪ್ರಾರ್ಥನಾ ಪುಸ್ತಕ "ವಚನ ಸಂಗಮ" ದ ಬೆಲೆ ೫ ರೂ. ಕೊಂಡು ಇಟ್ಟುಕೊಳ್ಳಬೇಕು ಮತ್ತು ಪ್ರಾರ್ಥನೆಗೆ ಬರುವಾಗ ತರಬೇಕು. ವಚನ ಸಂಗಮ ಪುಸ್ತಕದ ತೆಲುಗು, ತಮಿಳು ಮತ್ತು ಮರಾಠಿಯ ಅನುವಾದಗಳೂ ಇವೆ.

೬. ವಿಶ್ವಕಲ್ಯಾಣ ಮಿಷನ್‌ರವರ ಪ್ರಕಟಣೆಗಳೇ ಅಲ್ಲದೆ ಇನ್ನೂ ಬೇರೆ ಬೇರೆ ಪ್ರಕಾಶನ ಸಂಸ್ಥೆಗಳವರ ಪುಸ್ತಕಗಳೂ, ಧಾರ್ಮಿಕ ವಸ್ತುಗಳೂ ಮಾರಾಟಕ್ಕಿವೆ.

ಶರಣ ಮೇಳ ಉತ್ಸವ ಸಮಿತಿಯ ಹೊಣೆಯು ತೀರಾ ಹಿರಿದಾಗಿರುತ್ತದೆ. ಇದನ್ನು ವರ್ಷದಿಂದ ವರ್ಷಕ್ಕೆ ಸುವ್ಯವಸ್ಥಿತವಾಗಿ ವ್ಯಾಪಕವಾಗಿ ಬೆಳೆಸಬೇಕಾದರೆ ಜನರಿಂದ ಸ್ವಯಂ ಪ್ರೇರಣೆಯ ನೆರವು ಅಗತ್ಯ. ಆದ್ದರಿಂದ ಸಹೃದಯರು ಉದಾರವಾಗಿ ದೇಣಿಗೆ ಕಳಿಸಿ, ಸಹಕರಿಸಿ ಒಂದು ಮಾದರಿ ಕಾರ್ಯಕ್ರಮವನ್ನಾಗಿ ರೂಪಿಸಬೇಕೆಂದು ಕೋರುವೆವು.

ಕಾರ್ಯಾಧ್ಯಕ್ಷೆ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ

ಬೌದ್ಧಿಕ ಮತ್ತು ಆಧ್ಯಾತ್ಮಿಕ ಸಂಸ್ಕಾರ ನೀಡುವ ಉಪನ್ಯಾಸಗಳೊಡನೆ ಹೃನ್ಮ ಗಳನ್ನು ತಣಿಸುವ, ನಾಲ್ಕನೆಯ ಶರಣ ಮೇಳದಲ್ಲಿ ಏರ್ಪಾಡಾಗಿರುವ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳು.

- ಶರಣೆ ಕುಮಾರಿ ಉಮಾದೇವಿ ವಿಜಯಪುರ, ಶರಣೆ ಗಿರಿಜಮ್ಮ ಸುಬ್ಬಣ್ಣ ಮೈಸೂರು, ಧಾರವಾಡ, ಶರಣೆ ಉಮಾದೇವಿ ಪೂರ್ವೀಮಠ, ಯರಗಟ್ಟಿ ಇವರು ಸಂಪೂರ್ಣ ಕಾರ್ಯಕ್ರಮದಲ್ಲಿ ಪ್ರಾರ್ಥನಾ ಸೇವೆ ಸಲ್ಲಿಸುವರು.
- ಶರಣ ವಿಶ್ವನಾಥ ಬಸಪ್ಪ ಡೋಣೂರು, ಶರಣ ಮಲ್ಲಿಕಾರ್ಜುನಪ್ಪ ಚಳ್ಳಕೆರೆ ಭಾವಗೀತೆಗಳನ್ನು ಹಾಡುವರು.
- 13-1-1991 ರ ಸಂಜೆ 7–30 ರಿಂದ ನಡೆಯುವ ಮಕ್ಕಳ ಗೋಷ್ಠಿಯಲ್ಲಿ ಅನೇಕ ಮಕ್ಕಳು ಭಾಗವಹಿಸಿ, ಹಾಡುವಿಕೆ, ನೃತ್ಯಾಭಿನಯ, ಉಪನ್ಯಾಸ ಮಾಡುವರು.
- ರಾಷ್ಟ್ರೀಯ ಬಸವ ದಳ, ಶಿವಮೊಗ್ಗ ಅವರು ಅನೇಕ ನೃತ್ಯಗಳನ್ನು ಪ್ರದರ್ಶಿಸುವರು.
- ಚಿಕ್ಕಮಗಳೂರು ಜಿಲ್ಲೆಯ ಅಂತರರಾಷ್ಟ್ರೀಯ ಖ್ಯಾತಿಯ ಚಿಕ್ಕಪಟ್ಟಣಗೆರೆಯ ವೀರಗಾಸೆ ತಂಡದ ಶ್ರೀ ಬೊಮ್ಮಲಿಂಗಪ್ಪ-ಶ್ರೀ ಜಿ. ಟಿ. ಬಸವರಾಜಪ್ಪನವರಿಂದ ಜಾನಪದ ವೀರಗಾಸೆ ಪ್ರವಚನ.
- ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿ ಗ್ರಾಮದ ಶರಣ. ಗುರುಬಸಪ್ಪನವರ ನೇತೃತ್ವದಲ್ಲಿ ಆರ್. ಚಂದ್ರಶೇಖರ, ಸುಬ್ರಹ್ಮಣ್ಯಂ, ಬಸವನಗರ (ಸ ಲಟ್ಟಿ ಗ್ರಾಮ), ಮನೋಹರ ಕೂನೂರು, ಡಾ॥ ಹಾಲ್‌ದೊರೈ ಕೊಯಮ ತ್ತೂರು. ಇವರು ವಿಶೇಷವಾದ ಭಜನೆಗಳನ್ನು ಮಾಡಲಿರುವರು. ತಮ್ಮ ಜಾನಪದ ವೇಷಗಳೊಡನೆ ಬಸವ ಸ್ತುತಿಯನ್ನು ಮಾಡಲಿರುವರು.
- ದಿ. 14-1-1991 ರ ಸೋಮವಾರ ರಾತ್ರಿ, ಬೆಂಗಳೂರಿನ ಕಾರ್ತಿಕೇಯನ ಕಲಾಕೇಂದ್ರದ ಕುಮಾರಿ ಕೃತಿ 7–30 ರಿಂದ 9–30ರ ವರೆಗೆ ವಿಶೇಷ ನೃತ್ಯ ಪ್ರದರ್ಶನ ನೀಡಲಿರುವಳು.

  ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ಈ ಕಾರ್ಯಕ್ರಮದ ಪೋಷಕರಾಗಿದ್ದಾರೆ.
- ದಿ. 14–1–1991 ರಂದು ಶ್ರೀ ಎಸ್. ಎಸ್. ಬೀಳಗಿ ಎಂ. ಎಸ್ಸಿ ಅವರಿಂದ " ಶರಣರು ಬೋಧಿಸಿದ ಜೀವನ ಮೌಲ್ಯಗಳು " ಕುರಿತು ಸಂಗೀತ ಪ್ರವಚನ, ರಾತ್ರಿ 10-00.
- ಬಸವ ಧರ್ಮ ಪೀಠದ ಸರ್ವಜ್ಞಮೂರ್ತಿ ಅನಾಥಾಲಯದ ಬಾಲಕಿಯರಿಂದ ಸಮೂಹಗೀತೆಗಳು.

ಕೂಡಲ ಸಂಗಮ-ಸ್ಥಳದ ಮಹತ್ವ ಮತ್ತು ನಿರ್ದೇಶನ

- ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೋಕದಲ್ಲಿ ಕೃಷ್ಣ-ಮಲಾಪಹಾರಿ ನದಿಗಳ ಸಂಗಮದಲ್ಲಿರುವ ಸುಕ್ಷೇತ್ರ.
- ರಾಷ್ಟ್ರೀಯ ಹೆದ್ದಾರಿ ನಂ. 13ಕ್ಕೆ ಕೇವಲ 7 ಕಿಲೋಮೀಟರ್ ದೂರದಲ್ಲಿದೆ. ಹುನಗುಂದದಿಂದ 22 ಕಿ. ಮಿ. ಆಲಮಟ್ಟಿಯಿಂದ 30 ಕಿ. ಮಿ. ಸಂಗಮ ಕ್ರಾಸಿನ ಬಳಿ ಉತ್ಸವ ಸಮಿತಿಯು ವಿಚಾರಣಾ ಕೇಂದ್ರವನ್ನು ಹೊಂದಿರುವುದು. ವಿವರಗಳು ಬೇಕಾದವರು ಇಲ್ಲಿ ಪಡೆಯಬಹುದು.
- ಹುನಗುಂದ-ಇಳಕಲ್-ಬಾಗಿಲಕೋಟೆ- ಬಿಜಾಪುರ ನಗರಗಳು ಕೂಡಲ ಸಂಗಮಕ್ಕೆ ಸನಿಹದಲ್ಲಿರುವ ಪ್ರಮುಖ ಪಟ್ಟಣಗಳು. ಈ ಸ್ಥಳಗಳಿಂದ ಕೂಡಲ ಸಂಗಮ ಕ್ಷೇತ್ರಕ್ಕೆ ಬಹಳಷ್ಟು ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ.
- ಪುರಾತನ ಶೈವ ಕ್ಷೇತ್ರವಾದ ಕೂಡಲ ಸಂಗಮವು 12ನೆಯ ಶತಮಾನದ ಕಾಲದಲ್ಲಿ ಅತ್ಯಂತ ವೈಭವದ ಸ್ಥಿತಿಯಲ್ಲಿದ್ದು ಪ್ರಸಿದ್ಧ ಗುರುಕುಲವನ್ನು ಹೊಂದಿತ್ತು. ಗುರುಕುಲದ ಅಧಿಪತಿಗಳಾದ ಶ್ರೀ ಜಾತವೇದ ಮುನಿಗಳು ಬಹು ಖ್ಯಾತ ಯೋಗಿಗಳಾಗಿದ್ದರು.
- ಸಮತಾವಾದಿ, ಕ್ರಾಂತಿಯೋಗಿ ಬಸವಣ್ಣನವರು ವಿದ್ಯಾರ್ಜನೆ ಮಾಡಿದ, ತಪಸ್ಸುಗೈದ, ನವಧರ್ಮ ದ್ರಷ್ಟಾರರಾದ ಮತ್ತು ಐಕ್ಯರಾದ ಸ್ಥಾನ ಕೂಡಲ ಸಂಗಮ.
- ಈ ದಿವ್ಯ ಸಂಗಮವು ಒಂದು ದಂಡೆಗೆ ಬಸವಣ್ಣನವರ ಐಕ್ಯ ಮಂಟಪವನ್ನು ಮತ್ತೊಂದು ದಂಡೆಗೆ ನೀಲಾಂಬಿಕಾ ತಾಯಿಯ ಐಕ್ಯಮಂಟಪವನ್ನು ಹೊಂದಿದೆ.
- ಬಸವ ಧರ್ಮ ಪೀಠ ಟ್ರಸ್ಟ್ ಹತ್ತು ಎಕರೆ ಜಮೀನನ್ನು ಖರೀದಿಸಿ ಶ್ರೀ ಬಸವೇಶ್ವರ ಪೂಜಾ ಮಂಟಪ, ಅತಿಥಿ ಗೃಹ, ಶರಣರ ಮಂಟಪ ಮುಂತಾದುವನ್ನು ನಿರ್ಮಾಣ ಮಾಡುತ್ತಲಿದೆ.
- ೧೯೯೧ನೆ ಜನವರಿ 13, 14 ಮತ್ತು 15 ರಂದು ನಡೆಯಲಿರುವ ಶರಣ ಮೇಳಕ್ಕೆ ನಾಡಿನಾದ್ಯಂತದಿಂದ ಜನರು ಬರಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಕಾಂಟ್ರಾಕ್ಟ್ ಕ್ಯಾರಿಯೇಜ್) ವಿಶೇಷ ಬಸ್ಸುಗಳನ್ನು ವ್ಯವಸ್ಥೆ ಮಾಡಿದೆ. ಮತ್ತು ರಾಷ್ಟ್ರೀಯ ಹೆದ್ದಾರಿ 13ರ ಮೇಲೆ ಸಂಚರಿಸುವ ಬಸ್ಸುಗಳನ್ನು ನಿಲ್ಲಿಸಿ, ಮುಂದೆ ಹೋಗಲು ಸಾರಿಗೆ ಚಾಲಕರಿಗೆ ಆದೇಶ ನೀಡಿದೆ.
- ಶರಣ ಮೇಳದ ಸಮಯದಲ್ಲಿ ಬಾಗಿಲಕೋಟೆಯುವರೆಗೆ ಟ್ರೇನಿನಲ್ಲಿ ಬಂದು ಕೂಡಲ ಸಂಗಮಕ್ಕೆ ಬರಲು ಸಂಪರ್ಕ ಬಸ್ಸುಗಳ ಅನುಕೂಲತೆ ಇರುವುದು.

ದೂರವಾಣಿ : 325335

ಶರಣ ಮೇಳ ಉತ್ಸವ ಸಮಿತಿ, ಶಾಖೆಯ ಕಾರ್ಯಾಲಯ
ಬಸವ ಮಂಟಪ 2035, 20 ನೇ ಮುಖ್ಯ ರಸ್ತೆ, ಎರಡನೆಯ ಬ್ಲಾಕ್,
ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು–560010

॥ಓಂ ಶ್ರೀ ಗುರುಬಸವಲಿಂಗಾಯ ನಮಃ॥

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

೧. ಧರ್ಮ ಗುರು–

ಮಂತ್ರಪುರುಷ ವಿಶ್ವಗುರು ಬಸವಣ್ಣನವರು.

೨. ಧರ್ಮ ಸಂಹಿತೆ–

ಸಮಾನತೆ ಸಾರುವ ವಚನ ಸಾಹಿತ್ಯ.

೩. ಧರ್ಮ ಲಾಂಛನ–

ವಿಶ್ವದಾಕಾರದಲ್ಲಿರುವ ಪರಮಾತ್ಮನ ಕುರುಹಾದ ಇಷ್ಟಲಿಂಗ.

೪. ಧರ್ಮ ಕ್ಷೇತ್ರ–

ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮ.

೫. ಧರ್ಮ ಧ್ವಜ–

ಬಸವ ಮಂತ್ರ ಸಹಿತ ಷಟಸ್ಥಲ ಧ್ವಜ.

೬. ಧರ್ಮದ ಧ್ಯೇಯ–

ಜಾತಿವರ್ಣವರ್ಗರಹಿತ ಕಲ್ಯಾಣ ರಾಜ್ಯ ನಿರ್ಮಾಣ.

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಬಸವ ಕ್ರಾಂತಿ ದಿನ 15–1–1988 ರಂದು ಶರಣ ಸಮುದಾಯವು ಪ್ರತಿಜ್ಞಾಪೂರ್ವಕವಾಗಿ ಘೋಷಿಸಿದ ಸೂತ್ರಗಳು.

ಓಂ ಶ್ರೀ ಗುರುಬಸವಲಿಂಗಾಯ ನಮಃ

ಜನಗಣತಿ—1991 ಮತ್ತು ಲಿಂಗಾಯತ ಧರ್ಮ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

ಜನಗಣತಿಯು ಅತ್ಯಂತ ಮಹತ್ವದ ಒಂದು ಕಾರ್ಯ. ಒಂದು ದೇಶದಲ್ಲಿ ವಾಸಿಸುವ ಜನರು ಎಷ್ಟು ಎಂಬುದರ ಮಾಹಿತಿಯನ್ನು ಇದು ಒದಗಿಸುವುದಲ್ಲದೆ, ಈ ಜನರು ಅನುಸರಿಸುವ ಧರ್ಮ (ಮತ)ಗಳು ಯಾವುವು, ಇಲ್ಲಿರುವ ಜಾತಿಗಳು ಎಷ್ಟು ಎಂಬುದನ್ನೂ ಸಮೀಕ್ಷೆ ಮಾಡುವುದು. ಈ ವಿಷಯಕ್ಕೆ ಬಂದಾಗ ಸ್ವತಂತ್ರ ಧರ್ಮಾನುಯಾಯಿಗಳು ಯಾರು ಮತ್ತು ಎಷ್ಟು ಎಂಬುದನ್ನು ಜನಗಣತಿಯು ಗುರುತಿಸುವುದು. ಈ ಬಗ್ಗೆ ಲಿಂಗಾಯತ ಸಮಾಜದ ಜನರು ಏನನ್ನು ಬರೆಸಬೇಕು ಎಂಬುದರ ಕುರಿತು ಸಾಕಷ್ಟು ಚರ್ಚೆ ಈಗ ನಡೆಯುತ್ತಿದೆ.

ಲಿಂಗವಂತ/ವೀರಶೈವ ಧರ್ಮೀಯರಿಗೆ ಸ್ವತಂತ್ರವಾದ ಒಂದು ಕಾಲಮ್ ಅನ್ನು ಅಂದರೆ ಮಾನ್ಯತೆ ಪಡೆದ ಸಂಕ್ಷಿಪ್ತಾಕ್ಷರವನ್ನು ಕೊಡಬೇಕೆಂದು ಬಹಳ ವರ್ಷಗಳಿಂದಲೂ, ಅಖಿಲ ಭಾರತ ವೀರಶೈವ ಮಹಾಸಭಾ ಮುಂತಾದ ಸಂಸ್ಥೆಗಳು ಬೇಡಿಕೆಯನ್ನು ಮಂಡಿಸುತ್ತಿದ್ದರೂ, ಯಶಸ್ಸು ಕಂಡಿಲ್ಲ. ನರಿಯ ಕೂಗು ಗಿರಿಗೆ ಮುಟ್ಟೀತೆ? ಎಂಬ ಗಾದೆಯಂತೆ ಕರ್ನಾಟಕದ ವೀರಶೈವರ ಕೂಗು ಕೇಂದ್ರದ ಜನಗಣತಿ ಅಧಿಕಾರಿಗಳ ಕಿವಿಯನ್ನು, ಕೇಂದ್ರ ಸರ್ಕಾರದ ಕಿವಿಯನ್ನು ಮುಟ್ಟಿಲ್ಲ. ಇದಕ್ಕೆ ಕಾರಣ, ಸರ್ಕಾರದ ಕಿವಿ ಕಿವುಡೋ (ಸಾಮಾನ್ಯವಾಗಿ ಸರ್ಕಾರಗಳೆಲ್ಲ ಈ ದೇಶದಲ್ಲಿ ಕಿವುಡೆ !) ಅಥವಾ ಇವರ–ಅಂದರೆ ಈ ವೀರಶೈವರ ಕೂಗೇ ದುರ್ಬಲ ಮತ್ತು ದೋಷ ಮಿಶ್ರಿತವೋ?! ಈ ಎರಡು ಕಾರಣಗಳಲ್ಲಿ ನಾನು ಖಚಿತವಾಗಿ ತೋರಿಸುವುದು ಎರಡನೆಯ ಕಾರಣವನ್ನೇ ! ಈ ಬಗ್ಗೆ ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷರಿಗೆ ನಾನು ಅನೇಕ ಬಾರಿ ಹೇಳಿದ್ದೇನೆ; "ನೀವು ವೀರಶೈವ ಎಂಬ ಪದವನ್ನು (ಮುತ್ತಾತ ನೆಟ್ಟ ಆಲದ ಮರ ಎಂದು) ಈ ಲಿಂಗಾಯತ ಸಮಾಜಕ್ಕೆ ಅನ್ವಯಿಸಿ, "ಇದನ್ನು ಸ್ವತಂತ್ರ ಧರ್ಮವೆಂದು ಗುರುತಿಸಿರಿ" ಎಂದು ಎಷ್ಟೇ ಪ್ರಯತ್ನ ಪಟ್ಟರೂ ಅದು ಯಶಸ್ವಿಯಾಗದು.

ಆ ಪದವನ್ನು ಈ ಧರ್ಮಕ್ಕೆ ಬಳಸಿ ಸ್ವತಂತ್ರ ಧರ್ಮದ ಸ್ಥಾನ ಕೇಳುವುದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ನನ್ನ ಈ ಕಟುವಾದ ಅಥವಾ ಸ್ಪಷ್ಟವಾದ ಅಭಿಪ್ರಾಯವನ್ನು ಇನ್ನಷ್ಟು ಕಾಲ ತಡೆದು ಹೇಳಬೇಕು ಎಂದುಕೊಂಡೇ ಇದ್ದೆ. ಆದರೆ ಜನಗಣತಿ ಧಾವಿಸಿ ಬಂದಿರುವುದರಿಂದಲೂ, ಇಂಥ ಜನಗಣತಿಗೆ ಪುನಃ 10 ವರ್ಷ ಕಾಯಬೇಕಾಗಿರುವುದರಿಂದಲೂ, ಇನ್ನು ಅತಿ ವಿಳಂಬ ಬೇಡವೆಂದು ಈಗ ಸ್ಪಷ್ಟ ಅಭಿಪ್ರಾಯ ನೀಡುತ್ತಿರುವೆ. ಈ ಲೇಖನದ ಒಂದೊಂದು ಪದವನ್ನೂ ಓದಿರಿ, ಸಂದೇಹ ಬಂದರೆ ದಿ॥ 12-1-1991 ರಂದು ಕೂಡಲ ಸಂಗಮದಲ್ಲಿ ನಡೆಯುವ ಬಸವ ಧರ್ಮ ಸಂಸತ್ ಸಭೆಯಲ್ಲಿ ಚರ್ಚಿಸಿರಿ.

ಒಬ್ಬ ಚಕ್ರವರ್ತಿ ಜೀತ ಮಾಡುವಿಕೆ

ಬೃಹತ್ತಾದ, ಸ್ವತಂತ್ರವಾದ ಸಾಮ್ರಾಜ್ಯ ಒಂದರ ಚಕ್ರವರ್ತಿ ಬೇರೊಬ್ಬರ ಮನೆಯಲ್ಲಿ ಜೀತ ಮಾಡಲು ಇರುವುದು ಹೇಗೋ ಹಾಗಿದೆ ಲಿಂಗವಂತ ಸಮಾಜಕ್ಕೆ ವೀರಶೈವಪದವನ್ನು ಅನ್ವಯಿಸುವುದು. ಜೀತದಾಳು ಒಡೆಯರು ಕೊಟ್ಟುದನ್ನು ತಿನ್ನ ಬೇಕು ಅದು ಹಳಸಲೇ ಇರಲಿ, ಹುಳಸಲೇ ಇರಲಿ. ಅದರಲ್ಲಿ ತೃಪ್ತಿ ಪಡಬೇಕು. ಮಾಲಿಕರು ಕೈ ಎತ್ತಿ ಕೊಟ್ಟುದನ್ನು ತೊಟ್ಟು ಸಮಾಧಾನದಿಂದ ಇರಬೇಕು. ವಿಚಾರ-ಆಚಾರ-ಅಭಿಪ್ರಾಯ ಸ್ವಾತಂತ್ರ್ಯಗಳು ಅವನಿಗೆ ಇರುವುದಿಲ್ಲ.

ಲಿಂಗಾಯತ, ಲಿಂಗವಂತ ಪದಗಳು ಈ ಧರ್ಮಕ್ಕೆ ಸ್ವತಂತ್ರ, ಸಾರ್ವಭೌಮ ಸ್ಥಾನವನ್ನು ಕೊಟ್ಟರೆ, ವೀರಶೈವವು ಈ ಧರ್ಮವನ್ನು ಅಸ್ವತಂತ್ರ, ಊಳಿಗ ಮಾಡುವ ಪರಾವಲಂಬಿಯಾದ ಒಂದು ಪಂಥ (*Cult*) ವನ್ನಾಗಿ ಮಾಡುತ್ತದೆ. ಅನೇಕರ ತಿಳುವಳಿಕೆ, ಕೇಂದ್ರ-ರಾಜ್ಯ ಸರ್ಕಾರಗಳ ತಿಳುವಳಿಕೆ ಹೀಗೆ ಇದೆ. "ಹಿಂದೂ ಒಂದು ಧರ್ಮ, ಅದರಲ್ಲಿ ಶೈವ-ವೈಷ್ಣವ ಎನ್ನುವುವು ಭಕ್ತಿ ಪಂಥಗಳು, ಶೈವದಲ್ಲಿ ಸಪ್ತ ಶಾಖೆಗಳಿವೆ: ಇವೇ ಪಂಥಗಳು, ಈ ಏಳರಲ್ಲಿ ಒಂದು ವೀರಶೈವ ಪಂಥ." ವಿಚಾರ ಶೀಲರು ಆಲೋಚಿಸಿರಿ. ಮೇಲಿನ ವ್ಯಾಖ್ಯಾನವನ್ನೇ ಇವರು ಒಪ್ಪಿಕೊಳ್ಳುವುದಾದರೆ ಆಗ ಇವರಿಗೆ ಅಂದರೆ ಈ ವೀರಶೈವರಿಗೆ ಸ್ವತಂತ್ರ ಜನ ಗಣತಿ ಕಾಲಮ್ ಏಕೆ ಬೇಕು ? ಹಿಂದೂ, ಶೈವ ಕಕ್ಷೆಯಲ್ಲಿ ಬೇಕಾದಷ್ಟು ಪಂಥಗಳಿವೆ. ಹಾಗೇ ಇವರದೂ ಇರಬಹುದಲ್ಲವೆ?

ಲಿಂಗವಂತ, ಲಿಂಗಾಯತ ಪದಗಳು ಇಷ್ಟಲಿಂಗಧಾರಿಗಳಾದ, ಸಸ್ಯಾಹಾರಿ ಗಳಾದ ಈ ಸಮಾಜದ ಜನರನ್ನು ವಿಶೇಷವಾಗಿ ಗುರುತಿಸುತ್ತವೆ. ಆಗ ವ್ಯಾಖ್ಯಾನ ಹೀಗಾಗುತ್ತದೆ. "ಹಿಂದೂ ಅನ್ನುವುದು ಒಂದು ವಿಶಿಷ್ಟ ಧರ್ಮವಲ್ಲ. ಇದು ಭಾರತ ದಲ್ಲಿ ಹುಟ್ಟಿದ ಧರ್ಮಗಳನ್ನು ಒಳಗೊಂಡ ಒಂದು ಸಾಂಸ್ಕೃತಿಕ ಕಕ್ಷೆ. ಇದರಲ್ಲಿ ಅನೇಕ ಸ್ವತಂತ್ರವಾದ ಧರ್ಮಗಳಿವೆ. ಶೈವ, ವೈದಿಕ, ಬೌದ್ಧ, ಜೈನ, ಲಿಂಗಾಯತ ಸಿಖ್ ಇವು ಆರು ಸ್ವತಂತ್ರ ಧರ್ಮಗಳು. ಇನ್ನು ಅನೇಕ ಪಂಥಗಳು ಆರ್ಯ ಸಮಾಜ, ಬ್ರಹ್ಮ ಸಮಾಜ ಮುಂತಾದುವು ಇಲ್ಲಿವೆ."

ವೀರಶೈವ ಪದವು ಲಿಂಗಾಯತ ಧರ್ಮಾನುಯಾಯಿಗಳ ವೈಶಿಷ್ಟ್ಯ ಕಳೆದು, ಈ ಧರ್ಮವನ್ನು ಒಂದು ಪಂಥವನ್ನಾಗಿ, ಜಾತಿಯನ್ನಾಗಿ ಕೆಳಗಿಳಿಸುವುದು. ಈ ಧರ್ಮದ ಪ್ರಗತಿಪರ, (*Progressive*) ವೈಚಾರಿಕ (*rational*) ಕ್ರಾಂತಿಕಾರಿ (*revolutionary*) ಸ್ವರೂಪವನ್ನು ವಿಕೃತಗೊಳಿಸುವುದು. ಕರ್ನಾಟಕದಲ್ಲಿ ಅಧಿಕ ಸಂಖ್ಯೆಯಲ್ಲಿ ಇರುವ ಲಿಂಗಾಯತ ಸಮಾಜದಿಂದ ಆಚಾರ, ವಿಚಾರ, ಸಂಸ್ಕೃತಿ, ಆಲೋಚನಾ ಸರಣಿ ಎಲ್ಲದರಲ್ಲೂ ಬೇರೆಯೇ ಆದ 'ವೀರಶೈವ' ಎಂಬ ಗುಂಪುಗಳು ಇಂದಿಗೂ ತಮಿಳುನಾಡು-ಆಂಧ್ರದೇಶದ ಕೆಲವು ಭಾಗಗಳಲ್ಲಿವೆ. ಆ ವೀರಶೈವರ ಆಚರಣೆ ಹೀಗಿವೆ :

1. ಅವರು ಚತುರ್ವರ್ಣಗಳನ್ನು ಒಪ್ಪುತ್ತಾರೆ.

ಲಿಂಗಿ ಬ್ರಾಹ್ಮಣ, ಲಿಂಗೀಕ್ಷತ್ರಿಯ, ಲಿಂಗೀ ವೈಶ್ಯ, ಲಿಂಗೀ ಶೂದ್ರ ಎಂಬ ಗುಂಪುಗಳು ಅವರಲ್ಲಿದ್ದು, ಅಸ್ಪೃಶ್ಯರಿಗೆ ಅಲ್ಲಿ ದೀಕ್ಷೆಯ ಅವಕಾಶವಿಲ್ಲ.

2. ಅವರಲ್ಲಿ ಕೆಲವರು ಮಾಂಸಾಹಾರಿಗಳು.

3. ವೀರಶೈವ ದೀಕ್ಷೆ ಪಡೆದಾದ ಮೇಲೆ, ಪೂರ್ವದ ಜಾತಿಗಳು ಅಲ್ಲಿ ಅಳಿಯುವು; ದೀಕ್ಷಿತರಾದವರಲ್ಲಿ ಊಟ-ವಿವಾಹ ಸಂಬಂಧವಿಲ್ಲ. ಈ ದೀಕ್ಷೆ ಕೇವಲ ಆಧ್ಯಾತ್ಮಿಕ. ಮತ ದೀಕ್ಷೆಯಾಗುವುದೇ ವಿನಾ ಸಾಮಾಜಿಕ ಸ್ಥಾನಮಾನ, ಸಮಾನತೆಗಳನ್ನು ತಂದು ಕೊಡುವ ಧರ್ಮಾಂತರವಾಗದು. ಹೀಗೆ ಆ ಜನ ಕಟ್ಟಾ ಶಿವಭಕ್ತರಾದರೂ ವೇದಾ ಗಮ ಶಾಸ್ತ್ರ ಪುರಾಣಗಳ ಮೇಲೆ ಅವಲಂಬಿತರು.

ಕೇಂದ್ರ ಸರ್ಕಾರವು ಸಮೀಕ್ಷೆ ನಡೆಸಿ ಅಕಸ್ಮಾತ್ ಆ ಜನರ ಅಭಿಪ್ರಾಯ ಸಂಗ್ರ ಹಿಸಿದರೆ ಅವರು ಸಂಪೂರ್ಣವಾಗಿ ವೇದಾಗಮ ಪುರಾಣ ಪಾಲಕರಾದ್ದರಿಂದ ಜನಗಣತಿ ಯಲ್ಲಿ ಸ್ವತಂತ್ರ ಸ್ಥಾನವನ್ನು ಕೇಳರು. ಇಂಥ ಪ್ರಸಂಗ ಎದುರಾದಾಗ ಕರ್ನಾಟ ಕದ ವೀರಶೈವ ಮಹಾಸಭಾ ಮತ್ತು ವೀರಶೈವವಾದಿಗಳು ಖಂಡಿತಾ ಪಶ್ಚಾತ್ತಾಪ ಪಡದೆ ಇರುವುದಿಲ್ಲ.

ಕೇಂದ್ರ ಸರ್ಕಾರವು, 'ನಿಮ್ಮದು ಹೇಗೆ ಸ್ವತಂತ್ರ ಧರ್ಮ ?, ಎಂದು ಪ್ರಶ್ನೆ ಹಾಕಿದರೆ ಆಗ ಬೌದ್ಧ, ಸಿಖ್, ಜೈನ ಮುಂತಾದ ಭಾರತೀಯ (ಜನ್ಯ) ಧರ್ಮಗಳ ವರು, ಮುಸ್ಲಿಂ-ಕ್ರಿಶ್ಚಿಯನ್ ಮುಂತಾದ ಭಾರತದ ಹೊರಗೆ ಹುಟ್ಟಿದ ಧರ್ಮಗಳ ವರು ತಮ್ಮ ಧರ್ಮಗುರು, ಧರ್ಮಗ್ರಂಥ, ಧರ್ಮಕ್ಷೇತ್ರ, ಧರ್ಮ ಲಾಂಛನಗಳನ್ನು ಉದಾಹರಿಸಿ, ವಾದಿಸುವರು. ಇವುಗಳೆಲ್ಲ ವೇದಾಗಮಗಳ ಮೇಲೆ ಅವಲಂಬಿತ ವಾದ ಧರ್ಮಗಳಲ್ಲವಾಗ, ತಮ್ಮ ಧಾರ್ಮಿಕ ಸಂವಿಧಾನಗಳು ಬೋಧಿಸುವ ಆಚಾರ-ವಿಚಾರಗಳೆಲ್ಲವುಗಳ ಆಧಾರದ ಮೇಲೆ ತಮ್ಮ ತಮ್ಮ ಧಾರ್ಮಿಕ ಸ್ವಾವಲಂಬಿತ್ವವನ್ನು ಪ್ರತಿಪಾದಿಸುವರು. ಈ 'ವೀರ ಶೈವ' ವಾದಿಗಳು ಆಗ ಖಂಡಿತಾ ಸೋಲೊಪ್ಪಲೇ ಬೇಕಾಗುವುದು. ಈಗ, ಆಚರಣೆಯ ದೃಷ್ಟಿಯಿಂದ ಬಹುಪಾಲು ಮಠಪೀಠಾಧೀಶರು ಮತ್ತು ಅವರನ್ನು ಅನುಸರಿಸಿಕೊಂಡು ಬಂದ, ಸೂಕ್ತವಾಗಿ ಹೇಳಬೇಕೆಂದರೆ ಅನು ಕರಣೆ ಮಾಡಿಕೊಂಡು ಬಂದ ಅನುಯಾಯಿಗಳು ವೇದಾಗಮಗಳು ಪ್ರತಿಪಾದಿಸುವ ಮಾರ್ಗಾಚರಣೆಯಲ್ಲಿ ನಿರತರಾಗಿರುವುದರಿಂದ ನಾವೇ ಆಗಲಿ, ಮಹಾಸಭೆಯವರೇ ಆಗಲಿ, ಎಂಥಾ ಪ್ರಚಂಡ ವಕೀಲರೇ ಆಗಲೀ ಲಿಂಗಾಯತ ಸಮಾಜದವರದ್ದೊಂದು ಸ್ವತಂತ್ರ ಧರ್ಮ ಎಂದು ಪ್ರತಿಪಾದಿಸಲು ಅಸಮರ್ಥರಾಗುತ್ತೇವೆ. ಆಗ ನಮ್ಮ ನೆರವಿಗೆ ಬರುವುದು ಕೇವಲ ವಚನ ಸಾಹಿತ್ಯವೊಂದೆ ! ಇದು ಮಾತ್ರವೇ ಲಿಂಗವಂತ ಧರ್ಮಕ್ಕೆ ತನ್ನದೇ ಆದ ಸ್ವಂತಿಕೆಯನ್ನು ತಂದು ಕೊಡುವುದು.

ವೀರಶೈವ ಪದ ಪ್ರಯೋಗ ಕುರಿತು ನಾವೇಕೆ ಇಷ್ಟು ಅಸಹನೆ ಹೊಂದಿದ್ದೇವೆ ಎಂದು ನಿಮಗೆ ಆಶ್ಚರ್ಯವಾಗಬಹುದು. ವೀರಶೈವ ಪದದ ಬಳಕೆಯಿಂದ ಅನಾನುಕೂಲತೆಯಿದೆ ಜಗತ್ತಿನಲ್ಲಿರುವ ಧರ್ಮಗಳನ್ನು ತತ್ತ್ವಜ್ಞಾನಿಗಳು ಗುರುತಿಸಿ ಬರೆಯುವಾಗ ಕ್ರೈಸ್ತ, ಇಸ್ಲಾಂ, ಬೌದ್ಧ, ಜೈನ, ಯಹೂದಿ, ಫಾರ್ಸಿ, ಸಿಖ್ ಎಂದು ಬರೆಯುವರು. ಹಿಂದೂ ಧರ್ಮ ಎಂದು ಬರೆದು, ಆದರಲ್ಲಿ ಶೈವವನ್ನು ಗುರುತಿಸಿ ಇದರಲ್ಲಿ ಒಂದು ಕೊಂಬೆಯನ್ನಾಗಿ ವೀರಶೈವವನ್ನು ಪ್ರಸ್ತಾಪಿಸುವರು. ಹೀಗೆ ವೀರಶೈವ ಪದವು ಲಿಂಗವಂತ ಸಮಾಜದವರು ಅನುಸರಿಸುವ ಒಂದು **ಸ್ವತಂತ್ರ** ಮತ್ತು **ಸ್ವಾವಲಂಬಿ ಧರ್ಮವನ್ನು** ಒಂದು ಕೊಂಬೆ, ಅಥವಾ ರೆಂಬೆಯನ್ನಾಗಿ ಮಾಡಿದರೆ ಲಿಂಗಾಯತ (ಲಿಂಗವಂತ) ಪದವು ಒಂದು ಸ್ವತಂತ್ರ ಮತ್ತು ಸ್ವಾವಲಂಬಿ ವೃಕ್ಷವನ್ನಾಗಿ ಈ ಧರ್ಮವನ್ನು ಮಾಡುತ್ತದೆ. ವೀರಶೈವ ಪದದ ಅತಿ ಬಳಕೆಯಿಂದ ಬಸವಾದಿ ಪ್ರಮಥರ ಸಾಹಿತ್ಯ, ಸಂದೇಶ ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡದೆ ಹೋಗಿವೆ. ಇದು ಬಹು ದೊಡ್ಡ ಲೋಪ. ಇದು ತಪ್ಪಬೇಕಾದರೆ, ಹಿಂದೂ ಕಕ್ಷೆಯನ್ನು ವಿಸ್ತರಿಸಿ, ಅದರಲ್ಲಿ ಬೌದ್ಧ–ಜೈನ, ಲಿಂಗಾಯತ-ಸಿಖ್ ಧರ್ಮಗಳನ್ನು ಸೇರ್ಪಡೆ ಮಾಡಬೇಕು.

ತಾವು ಮಾಡುತ್ತಿರುವ ತಪ್ಪನ್ನು ವೀರಶೈವವಾದಿಗಳು, ವೀರಶೈವ ಪದ ಪ್ರೇಮಿಗಳು ತಿದ್ದಿಕೊಳ್ಳದೆ ಹೋದರೆ, ಭಾರತ ದೇಶದಲ್ಲಿ ಮಾತ್ರವಲ್ಲ ಜಗತ್ತಿನಲ್ಲಿಯೇ ಅಮೂಲ್ಯವಾಗಿರುವ ವಚನ ಸಾಹಿತ್ಯ ಸಂವಿಧಾನವನ್ನು, ಅದರ ಶಿಲ್ಪಿಗಳಾದ ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ಸಂದೇಶಗಳ ಮಹತ್ವವನ್ನು ಎತ್ತಿ ಸಾರಲೋಸುಗ ಬಸವ ತತ್ತ್ವಾನುಯಾಯಿಗಳು "ಬಸವ ಧರ್ಮ" ಎಂಬ ಪದವನ್ನು ಬಳಸಿ, ಸಂವಿಧಾನಾತ್ಮಕ ಮನ್ನಣೆ (***Constitutional recognition***) ಯನ್ನು ಪಡೆಯಲು ಯತ್ನಿಸಬೇಕಾದೀತು. ಅಂದೇ ಶ್ರೀ ಸಿದ್ಧರಾಮೇಶ್ವರರಂತಹ ದೂರಾಲೋಚನೆಯ ಪ್ರೌಢ ಶರಣರು ಈ ಧರ್ಮಕ್ಕೆ ಬಸವ ಧರ್ಮ ಎಂದು ಇದು ಪ್ರತಿಪಾದಿಸುವ ಯೋಗಕ್ಕೆ ಬಸವನ ಯೋಗವೆಂದು ಹೆಸರನ್ನಿಟ್ಟರು. ಹರಿಹರ ಮಹಾಕವಿ 'ಬಸವ ದೀಕ್ಷೆ' ಎಂಬ ಪದವನ್ನು ಪ್ರಯೋಗಿಸುವನು. ಬೌದ್ಧ, ಕ್ರೈಸ್ತ ಧರ್ಮದಂತೆ ಸ್ಥಾಪಕರ ಹೆಸರನ್ನು ಸೇರಿಸಿಕೊಂಡು ಲಿಂಗಾಯತ ಧರ್ಮವು ಸಾಗಿಬಂದಿದ್ದರೆ ಈಗಿರುವಷ್ಟು ಗೌಜು, ಗೊಂದಲಗಳು ಇರುತ್ತಿರಲಿಲ್ಲ. ತತ್ತ್ವಪ್ರಿಯರು, ದೇವನಿಷ್ಠರೂ ಆದ ಬಸವಣ್ಣನವರು ತಮ್ಮ ಹೆಸರನ್ನು ಮುಂದು ಮಾಡುವ ಪದವನ್ನು ಬಳಸಿಕೊಳ್ಳದೆ ದೇವವಾಚಕ ಪದವನ್ನು ಬಳಸಲು ಇಷ್ಟಪಟ್ಟು ಲಿಂಗಭಕ್ತ, ಲಿಂಗಶರಣ, ಲಿಂಗವಂತ, ಲಿಂಗಾಯತ ಎಂದು ಪ್ರಯೋಗಿಸಿದರು.

1. ಲಿಂಗವಂತ ಲಿಂಗವಂತನ ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ
   –ಗುರು ಬಸವಣ್ಣನವರು
2. ದೇಹನಾಮ ಸೊಗಸದು ಲಿಂಗಾಯತಂಗೆ
   ಮಾನವ ನಾಮ ಸೊಗಸದು ಜಂಗಮ ಭಕ್ತಂಗೆ
   –ಚನ್ನಬಸವಣ್ಣ

ಗುರು ಬಸವಣ್ಣನವರು, ಅಲ್ಲಮ ಪ್ರಭುಗಳು, ತಮ್ಮೆಲ್ಲ ವಚನಗಳಲ್ಲಿ ವೀರಶೈವ ಪದವನ್ನು ಒಂದು ಬಾರಿಯೂ ಬಳಸದೆ ಇರುವುದು ಬಹಳ ಗಮನಾರ್ಹವಾಗಿದೆ. ಇದನ್ನೆಲ್ಲ ಅರಿತು, ಅವರು ಪ್ರತಿಪಾದಿಸಿದ ಧರ್ಮವನ್ನು ಅವರು ಇಷ್ಟಪಟ್ಟಂತೆ ಕರೆಯುವುದು ಸೂಕ್ತವೇ ವಿನಾ ತಮ್ಮ ತಮ್ಮ ಮನಸ್ಸಿಗೆ ಬಂದಂತಲ್ಲ !

ಆದ್ದರಿಂದ ಈಗ ಲಿಂಗವಂತ ಧರ್ಮೀಯರು ಕೆಲವು ವಿಷಯಗಳಲ್ಲಿ ತಿಳುವಳಿಕೆ ಹೊಂದುವುದು ಅಗತ್ಯವಾಗಿದೆ.

1. ಜನಗಣತಿಗೆ ಮಾಹಿತಿ (ವಿವರ) ಕೊಡುವುದು ಅತ್ಯಗತ್ಯ. ಅದು ಏನೂ ಉಪಯೋಗವಿಲ್ಲದ ಚಟುವಟಿಕೆ ಎಂದು ಭಾವಿಸಿ ಉದಾಸೀನ ತಾಳಬಾರದು. ಈಗ 1991 ರ ಸಾಲಿನ ಜನಗಣತಿಗೆ ಪೂರ್ವ ಸಿದ್ಧತೆ ನಡೆಯುತ್ತಿದ್ದು, ಫೆಬ್ರುವರಿ ತಿಂಗಳಲ್ಲಿ ಗಣತಿಯ ಅಧಿಕಾರಿಗಳು ಬರುವರು, ತಪ್ಪಿಸಿಕೊಳ್ಳದೆ, ಉದಾಸೀನ ಮಾಡದೆ ಜನರು ವಿವರಗಳನ್ನು ಕೊಡಬೇಕು.

2. ಜನಗಣತಿಯ ಫಾರ್ಮಿನಲ್ಲಿ 'ಮತ' ಎಂಬ ಒಂದು ಕಾಲಮ್ ಇದೆ. ಇಲ್ಲಿ, ಹಿಂದೂ ಅಂದರೆ **H** (ಹೆಚ್) ಎಂತಲೂ, ಮುಸ್ಲೀಮರಿಗೆ **M** (ಎಮ್) ಎಂತಲೂ ಕ್ರೈಸ್ತರಿಗೆ **C** (ಸಿ) ಎಂತಲೂ, ಸಿಖ್‌ರಿಗೆ **S** (ಎಸ್) ಎಂತಲೂ, ಬೌದ್ಧರಿಗೆ **B** (ಬಿ) ಎಂತಲೂ, ಜೈನರಿಗೆ **J** (ಜೆ) ಎಂತಲೂ ಬರೆಸಲು ಅವಕಾಶವಿದೆ. ಈ ಕೋಡ್ ಅಕ್ಷರಗಳು ಭಾರತ ಸರ್ಕಾರದ ನೋಂದಣಿಕಾರ ಅಧಿಕಾರಿಗಳಿಂದ ಮಾನ್ಯ ಮಾಡಲ್ಪಟ್ಟಿವೆ. ಈ ಧರ್ಮಗಳನ್ನು ಹೊರತುಪಡಿಸಿ ಇನ್ನಿತರ ಧರ್ಮಗಳವರು 'ಮತ', ***Religion*** ಎಂದಿರುವಲ್ಲಿ ತಮ್ಮ ಧರ್ಮದ ಪೂರ್ಣ ಹೆಸರು ಬರೆಯಬೇಕು. ಇಲ್ಲಿ, ಲಿಂಗಾಯತ, ಲಿಂಗವಂತ ಎಂಬ ಪದಗಳನ್ನೇ ಲಕ್ಷ್ಯವಿಟ್ಟು ಉಲ್ಲೇಖಿಸಿ, ಬರೆಸಿ, ಸರಿಯಾಗಿ ದಾಖಲಾಯಿತೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

3. 'ಮತ' ಎಂದಿರುವಲ್ಲಿ ಹಿಂದು ಎಂದು ಲಿಂಗಾಯತ ಧರ್ಮಾನುಯಾಯಿಗಳು ಬರೆಸಿದರೆ ತಪ್ಪಾಗುತ್ತದೆ. ಏಕೆಂದರೆ, ದ್ವಿಜ, ಶೂದ್ರ, ಅತಿಶೂದ್ರ (ಅಸ್ಪೃಶ್ಯ, ಪಂಚಮ ವರ್ಣೀಯ) ಎಂಬ ವಿಭಜನೆ ಸಾಂಪ್ರದಾಯಿಕ ಹಿಂದು ಸಮಾಜದಲ್ಲಿದೆ. ಯಜ್ಞೋಪವೀತವು ಈ ವಿಂಗಡಣೆಯನ್ನು ಗುರುತಿಸುವ ಚಿಹ್ನೆ. ದ್ವಿಜರಲ್ಲಿ ಪುನಃ ವರ್ಗೀಕರಣ ಉಂಟು. ಇದು ನನಗೆ ಈಗ ಅಪ್ರಸ್ತುತ. ಜನ್ನಿವಾರವನ್ನು ಧರಿಸಿದವರು ದ್ವಿಜರು, ಶೂದ್ರರಿಗೆ ಈ ಅವಕಾಶವಿಲ್ಲ. ಇನ್ನು ಅತಿ ಶೂದ್ರರಾದ ದಲಿತರಂತೂ ಅದನ್ನು ಧರಿಸಲೇ ಆರರು. ಸರಿ, ಜನ್ನಿವಾರವನ್ನು ಧರಿಸದೇ ಇರುವ ಲಿಂಗಾಯತ ಧರ್ಮಾನುಯಾಯಿಗಳನ್ನು, ಜನ್ನಿವಾರವಿಲ್ಲದ ಕಾರಣ, ಶೂದ್ರ ಪಂಗಡದಲ್ಲಿ ಸೇರಿಸಬೇಕೆ? ವಿಶ್ವಾತ್ಮನನ್ನು ಗೋಲಾಕಾರದಲ್ಲಿ ಧರಿಸಿಕೊಂಡು ನಿತ್ಯವೂ ಪೂಜಿಸುವ ಲಿಂಗಾಯತರು ಅದೆಂತು ಶೂದ್ರರು? ಇಷ್ಟ

ಲಿಂಗವನ್ನು ಧರಿಸಿ, ಅಂಗೈಯಲ್ಲಿರಿಸಿಕೊಂಡು ನಿತ್ಯವೂ ಪೂಜಿಸುವವನು ಹುಟ್ಟಿನಿಂದ ಯಾರೇ ಇರಲಿ,ಅವನು ಶೂದ್ರನಲ್ಲ, ಅತಿಶೂದ್ರನೂ ಅಲ್ಲ. ಎಂಬುದನ್ನರಿಯಬೇಕು ನಿರಾಕಾರ ಪರಮಾತ್ಮನನ್ನು ಇಷ್ಟಲಿಂಗರೂಪದಲ್ಲಿ **ಪೂಜಿಸಿ**, **'ನಿಜವಾದ ಅರ್ಥದಲ್ಲಿ ದೇವಪೂಜಕ' ಎಂಬ ಹಿರಿಮೆ** ಲಿಂಗಾಯತನದೆಂದರೆ ಉತ್ಪ್ರೇಕ್ಷೆಯಾಗದು.

ಸ್ವತಂತ್ರವಾಗಿ, ಮತ ಕಾಲಮ್‌ದಲ್ಲಿ ಲಿಂಗಾಯತ ಎಂದು ಬರೆಸಿದ ಮಾತ್ರಕ್ಕೆ, ಲಿಂಗಾಯತರು ಹಿಂದುಗಳಲ್ಲ ಎಂದೇನಿಲ್ಲ, ಏಕೆಂದರೆ ಹಿಂದೂ ಭಾವನಾತ್ಮಕ ಬೆಸುಗೆಯ ಪದ; ಒಂದು ಪರಂಪರೆಯನ್ನು, ಸಾಂಸ್ಕೃತಿಕ ಕಕ್ಷೆಯನ್ನು ಪ್ರತಿನಿಧಿಸುತ್ತದೆ. ಸರ್ಕಾರವನ್ನು ನಡೆಸುವ ರಾಜಕಾರಣಿಗಳಾಗಲೀ, ಅಧಿಕಾರಿಗಳಾಗಲೀ, ಅವರುತತ್ತ್ವಜ್ಞಾನಿಗಳು ವಿಶ್ಲೇಷಕರೂ ಆಗದ್ದರಿಂದ ತಪ್ಪು ಪದಗಳು ಪ್ರಯೋಗವಾಗುತ್ತ ಬಂದಿವೆ. ಹಿಂದೂ ಶೈವ, ಹಿಂದೂ ವೈದಿಕ. ಹಿಂದೂ ಜೈನ. ಹಿಂದೂ ಬೌದ್ಧ, ಹಿಂದೂ ಲಿಂಗಾಯತ, ಹಿಂದೂ ಸಿಖ್, ಎಂದು ರೂಢಿಯಲ್ಲಿ ಬಂದಿದ್ದರೆ ಈ ಪ್ರಯೋಗ ಅರ್ಥಗರ್ಭಿತವಾಗುತ್ತಿತ್ತು. ಹಿಂದೂ ಮತ್ತು ಜೈನ, ಹಿಂದೂ ಮತ್ತು ಸಿಖ್ ಎಂದು ತಪ್ಪು ತಪ್ಪಾಗಿ ಬರೆದು, ಅದೇ ಜನರಲ್ಲಿ ರೂಢಿಗೊಂಡು ಅವೈದಿಕ ಧರ್ಮಗಳನ್ನೆಲ್ಲ ಅಹಿಂದು ಧರ್ಮಗಳೆನ್ನುವ ಪ್ರಮಾದ ನಡೆದು ಬರುತ್ತಿದೆ. ಈ ಮಹಾನ್ ಲೋಪವನ್ನು ಸರಿಪಡಿಸುವುದು ಹೇಗೆ ಎಂಬುದೇ ದೊಡ್ಡ ಸಮಸ್ಯೆಯಾಗಿದೆ.

ಈ ಮಹಾಪ್ರಮಾದ ಸರಿಪಡಿಸಲು ಆಗದ್ದರಿಂದ ಸಾಂಸ್ಕೃತಿಕವಾಗಿ ಭಾವನಾತ್ಮಕವಾಗಿ ಲಿಂಗಾಯತ ಧರ್ಮಾನುಯಾಯಿಗಳು ಹಿಂದೂ ಸಂಸ್ಕೃತಿಯ ಅವಿಭಾಜ್ಯ ಅಂಗವೇ ಆಗಿದ್ದರೂ, ತಾತ್ತ್ವಿಕವಾದ ನಿಖರತೆಗೋಸ್ಕರ ಮತ (*Religion*) ಕಾಲಮ್‌ದಲ್ಲಿ ಲಿಂಗಾಯತ ಎಂದು ಬರೆಸಬೇಕು. ಸಾಂಪ್ರದಾಯಿಕ ಹಿಂದುಗಳು, ಅಂದರೆ ವೇದ ಧರ್ಮಾನುಯಾಯಿಗಳು ನಂಬುವ ವರ್ಣಾಶ್ರಮ ವರ್ಗೀಕರಣ ವ್ಯವಸ್ಥೆ, ಹೋಮ-ಯಜ್ಞಗಳ ಆಚರಣೆ, ಬಹುದೇವತೋಪಾಸನೆ, ಸ್ತ್ರೀ ಸಂಸ್ಕಾರ ನಿರಾಕರಣೆ, ಪಂಚಸೂತಕಗಳ ಆಚರಣೆ–ಇವೆಲ್ಲವನ್ನೂ ಲಿಂಗಾಯತ ಧರ್ಮವು ನಿಷೇಧಿಸುವ ಕಾರಣ, ಲಿಂಗಾಯತ ಧರ್ಮೀಯರು H (ಹೆಚ್) ಎಂದು ಸಂಕ್ಷಿಪ್ತಾಕ್ಷರ ಬರೆಸದೆ, ಪೂರ್ತಿಯಾಗಿ ಲಿಂಗಾಯತ ಎಂದು ಬರೆಸಬೇಕು. ●

ಮಹತ್ವಪೂರ್ಣ ಸೂಚನೆಗಳನ್ನು ಗಮನಿಸಿರಿ

* ಒಬ್ಬ ವ್ಯಕ್ತಿ ಹುಟ್ಟಿನಿಂದಲೇ ಲಿಂಗಾಯತ ಧರ್ಮಾನುಯಾಯಿಯಾಗಿರಬಹುದು ಅಥವಾ ದೀಕ್ಷಾ ಸಂಸ್ಕಾರ ಹೊಂದಿ ಲಿಂಗಧಾರಣೆ ಮಾಡಿಕೊಂಡು ಈ ಧರ್ಮಾನುಯಾಯಿಯಾಗಿರಬಹುದು. ಉಭಯತರೂ ಬರೆಸುವಾಗ ತಮ್ಮದು 'ಲಿಂಗಾಯತ ಧರ್ಮ' ಎಂಬುದಾಗಿ ಬರೆಸಬೇಕು.

* ಮತ-ಹಿಂದು ಎಂದು ಬರೆಸಿ, ಜಾತಿ-ಲಿಂಗಾಯತ ಎಂದು ಬರೆಸಬಾರದು. ಏಕೆಂದರೆ ಹಿಂದುವು ಒಂದು ಸಾಂಸ್ಕೃತಿಕ ಪರಂಪರೆ (*Cultural heritage*)ಯೇ ವಿನಾ ಒಂದು ವಿಶಿಷ್ಟ ಧರ್ಮವಲ್ಲ. ಲಿಂಗಾಯತವು ಒಂದು ಜಾತಿಯಲ್ಲ. ಇದು ಹಿಂದೂ ಸಾಂಸ್ಕೃತಿಕ ಕಕ್ಷೆಯಲ್ಲಿ ಬಂದರೂ ಸ್ವತಂತ್ರವಾಗಿ ಇರುವ ಒಂದು ಧರ್ಮ.
* ಜನಗಣತಿಯ ಕಾಲಂದಲ್ಲಿ ಕೇವಲ ಧರ್ಮದ ಹೆಸರು, ಲಿಂಗಾಯತ ಧರ್ಮ ಮತ್ತು ತಂತಮ್ಮ ಉದ್ಯೋಗ ಬರೆಸಬೇಕೇ ವಿನಾ ಜೊತೆಗೆ ಜಾತಿ-ಉಪಜಾತಿ, ಪಂಗಡ ಮುಂತಾದುವನ್ನು ಬರೆಸಬಾರದು. ಏಕೆಂದರೆ ಜನಗಣತಿಯು ಭಾರತ ದೇಶದಲ್ಲಿ ಯಾವಾವ ಧರ್ಮಗಳ ಅನುಯಾಯಿಗಳು ಇದ್ದಾರೆಂಬುದನ್ನು ಗಮನದಲ್ಲಿಟ್ಟುಕೊಂಡು, ದೇಶದಲ್ಲಿನ ಜನಸಂಖ್ಯೆಯನ್ನು ನಿರ್ಧರಿಸುತ್ತದೆ. ಇದರಲ್ಲಿ ಜಾತಿ–ಉಪಜಾತಿಗಳನ್ನು ಕಾಣಿಸುವುದರಿಂದ ಯಾವುದೇ ರೀತಿಯ ಪ್ರಯೋಜನ, ಸೌಲಭ್ಯ ಸಿಗದು. ಉದ್ಯೋಗ ಪ್ರಾಪ್ತಿ, ರಿಸರ್ವೇಷನ್‌ಗೂ ಅನುಕೂಲವಾಗದು ಮತ್ತು ರಿಸರ್ವೇಷನ್ ಆಧಾರದ ಮೇಲೆ ಸಿಕ್ಕ ಸೌಲಭ್ಯಕ್ಕೂ ಚ್ಯುತಿ ಬರದು. ಜನಗಣತಿ ಅತ್ಯಂತ ರಹಸ್ಯವಾಗಿ ಇಡಲ್ಪಡುವ ದಾಖಲೆ. ಆದ್ದರಿಂದ ಲಿಂಗಧಾರಣೆ ಮಾಡಿಕೊಂಡ ಎಲ್ಲರೂ ತಮ್ಮನ್ನು ಲಿಂಗಾಯತ ಧರ್ಮದವರೆಂದೇ ಜನಗಣತಿಯಲ್ಲಿ ಘೋಷಿಸಬೇಕು.

  ಕ್ರೈಸ್ತರು ಬರೀ ಕ್ರೈಸ್ತರು ಎಂದು ಬರೆಸುವರೇ ವಿನಾ ತಮ್ಮ ಮೊದಲಿನ ಜಾತಿ ಬರೆಸರು. ಮುಸ್ಲೀಮರೂ ಅಷ್ಟೆ. ಅದೇ ರೀತಿ ಲಿಂಗಾಯತ ಧರ್ಮಾನುಯಾಯಿ ತನ್ನ ಜಾತಿಯನ್ನು ಹೇಳತಕ್ಕದ್ದಲ್ಲ.
* ಲಿಂಗಾಯತ/ಲಿಂಗವಂತ ಪದಗಳಿಗೇ ಹೆಚ್ಚು ಮಹತ್ವ ಕೊಡಿರಿ. ಮತ್ತು ನಿಮ್ಮ ಸುತ್ತಲಿನವರಿಗೆ ಮನವರಿಕೆ ಮಾಡಿಕೊಡಿರಿ. ಜನಗಣತಿಗೆ ಬರುವ ಅಧಿಕಾರಿಗಳು ಅವಸರದಲ್ಲಿ ಏನೋ ಕೇಳುತ್ತಾರೆ. ತಿಳುವಳಿಕೆಯಿಲ್ಲದ ಜನರು ಏನೇನೋ ಹೇಳುವಷ್ಟರಲ್ಲಿ, ಅವರಿಗೂ ಬೇಗ ಬೇಗ ಮುಂದೆ ಸಾಗುವ ಅವಸರವಿರುತ್ತದೆ, ಏನನ್ನಾದರೂ ಬರೆದುಕೊಂಡು ಹೋಗುತ್ತಾರೆ. ಜನರ ಅಜ್ಞಾನ ಮತ್ತು ಜನಗಣತಿ ಜನರ ಅರ್ಥಂಬರ್ಧ ಜ್ಞಾನ ಮತ್ತು ಅವಸರದಿಂದ ತಪ್ಪು ತಪ್ಪಾದ ಮಾಹಿತಿ ದಾಖಲೆಯಾಗುತ್ತದೆ.
* ಬಸವಾದಿ ಪ್ರಮಥರ ಆಚಾರ-ವಿಚಾರ, ನಂಬಿಕೆ-ಸಂಸ್ಕೃತಿಗೆ ಪೂರ್ತಿ ಬೇರೆಯೇ ಆದ ಜಾತಿಪದ್ಧತಿ-ವರ್ಣಾಶ್ರಮ ವ್ಯವಸ್ಥೆಯನ್ನು ಪಾಲಿಸುವ ಒಂದು ಗುಂಪಿನ ಜನ ತಮಿಳುನಾಡು–ಆಂಧ್ರಗಳಲ್ಲಿರುವ ಕಾರಣ, ವೀರಶೈವ ಪದ ತುಂಬಾ ಗೊಂದಲಕ್ಕೆ ಈಡು ಮಾಡುತ್ತದೆ. ಆದ್ದರಿಂದ ಕರ್ನಾಟಕದಲ್ಲಿ ಒಂದು ಪ್ರಬಲ ಪರಂಪರೆಯನ್ನು ಹೊಂದಿರುವ ಇಷ್ಟಲಿಂಗಧಾರಿಗಳು ಲಿಂಗಾಯತ ಎಂಬ ಪದದಿಂದಲೇ ಗುರುತಿಸಿಕೊಳ್ಳುವುದು ಒಳ್ಳೆಯದು.

* ಲಿಂಗಾಯತ ಧರ್ಮಾನುಯಾಯಿಗಳು ಜನಗಣತಿಯ ಕಾಲಮ್‌ದಲ್ಲಿ ಬರೆಯಲು **L** ಎಂಬ ಸಂಕ್ಷಿಪ್ತಾಕ್ಷರ ದೊರೆಯುವವರೆಗೂ ಈ ಸಮಾಜದ ಜನರು ಲಿಂಗಾಯತ ಎಂಬುದನ್ನು ಪೂರ್ಣವಾಗಿ ಬರೆಯಲು ಉಪನೋಂದಣಿ ಅಧಿಕಾರಿಗಳು, ಭಾರತ ಸರ್ಕಾರದ ಗೃಹ ಮಂತ್ರಾಲಯ ಶಾಖೆ, ಭಾರತದ ಪ್ರಧಾನ ನೋಂದಣಿಕಾರರ ಕಾರ್ಯಾಲಯ, **2/A** ಮಾನಸಿಂಗ್ ರಸ್ತೆ ನವದೆಹಲಿ ಇವರಿಂದ ಆದೇಶ ಬಂದಿದೆ. ನಂ. **9/1884-CD** ದಿ. 12-12-1988. ಮತ್ತು ಮನೆಯ ಯಜಮಾನ ಏನು ವಿವರವನ್ನು ಕೊಡುತ್ತಾನೋ ಅದನ್ನು ಬರೆದುಕೊಳ್ಳಲೇಬೇಕು ಎಂಬ ಸೂಚನೆಯೂ ಗಣತಿ ಅಧಿಕಾರಿಗಳಿಗೆ ಕೊಡಲ್ಪಟ್ಟಿರುತ್ತದೆ. ಆದ್ದರಿಂದ ಎಚ್ಚರಿಕೆಯಿಂದ ಮಾಹಿತಿ ಕೊಡಲು ನಾವು ಜನಜಾಗೃತಿ ಮಾಡಬೇಕಾಗಿದೆ ಅಷ್ಟೆ.
* ಭಾರತದಲ್ಲಿ ಸಂವಿಧಾನಾತ್ಮಕ ಮಾನ್ಯತೆ ಸಿಕ್ಕು(*Constitutional recognisition)* ಇಷ್ಟಲಿಂಗಧಾರಿಗಳದು ಒಂದು ಧರ್ಮ ಎಂಬ ತಿಳುವಳಿಕೆ-ಅರಿವು ಲಿಂಗಾಯತರು-ಲಿಂಗಾಯತೇತರು ಉಭಯತರಲ್ಲೂ ಬೆಳೆಯಬೇಕಾದರೆ, ಬಲಿಯಬೇಕಾದರೆ ಲಿಂಗಾಯತ/ಲಿಂಗವಂತ ಧರ್ಮ ಎಂಬ ಪ್ರಯೋಗ ಹೆಚ್ಚು ಆಗಬೇಕು. 'ವೀರಶೈವ' ಪದ ಬಳಕೆ ಕುರಿತು ಹಠಮಾರಿತನ ಪ್ರದರ್ಶಿಸುವ ಜನರು ಭವಿಷ್ಯದಲ್ಲಿ ಸಹ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುವ ಪ್ರಯತ್ನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಎಷ್ಟು ಬೇಗನೆ ತಿಳಿಯುವರೋ ಅಷ್ಟೂ ಒಳ್ಳೆಯದು.

ಏನಾದರೂ ಸಂದೇಹವಿದ್ದರೆ ಪತ್ರ ಬರೆದು, ಪರಿಹಾರ ಮಾಡಿಕೊಂಡು, ಜನಗಣತಿ ಕಾಲಂದಲ್ಲಿ ಸರಿಯಾಗಿ ಬರೆಸುವಲ್ಲಿ ಎಲ್ಲರೂ ಆಸಕ್ತಿವಹಿಸುವಿರಾಗಿ ನಂಬುತ್ತೇವೆ. ಮತ್ತು ಪ್ರತಿಯೊಬ್ಬರೂ ತಮ್ಮ ಸುತ್ತಲಿನವರಿಗೆ ಈ ವಿಷಯ ತಿಳಿಸಬೇಕು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
ಬಸವ ಧರ್ಮ ಪೀಠ ಮತ್ತು ಬಸವ ಧರ್ಮ ಸಂಸತ್ ಪರವಾಗಿ
ಮಹಾಮನೆ ಮಹಾಮಠ, ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಿಜಾಪುರ

ಬೆಂಗಳೂರು ಶಾಖೆಯ ವಿಳಾಸ : ದೂರವಾಣಿ : 325335
ಬಸವಮಂಟಪ. 2035, 2ನೇ ಬ್ಲಾಕು, 20 ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂ-10

ಶರಣ ಬಂಧುಗಳಿಗೆ ಸೂಚನೆ


ಶರಣ ಮೇಳವು ಧಾರ್ಮಿಕ, ಆಧ್ಯಾತ್ಮಿಕ ಸಂಸ್ಕಾರವನ್ನು ಜನರಲ್ಲಿ ಮೈಗೂಡಿಸಲು ಯೋಜಿತವಾದ ಒಂದು ಸಮ್ಮೇಳನ. ತತ್ತ್ವದ ತಳಹದಿಯ ಮೇಲೆ ಜ್ಞಾನಪ್ರಧಾನವಾಗಿ ಇದು ನಡೆಯಬೇಕೆಂದು ವ್ಯವಸ್ಥಾಪಕರ ಉದ್ದೇಶ; ಮಾತ್ರವಲ್ಲ ಧರ್ಮಾನುಯಾಯಿಗಳಿಗೆ ಸೈದ್ಧಾಂತಿಕ, ಧಾರ್ಮಿಕ, ಸಾಂಸ್ಕೃತಿಕ ಸಂಸ್ಕಾರವನ್ನು ಮೈಗೂಡಿಸಬೇಕೆಂಬುದು ಶರಣ ಮೇಳದ ಪ್ರಮುಖ ಧ್ಯೇಯ.

ಆದ್ದರಿಂದ ಜನರು ಬಂದು ನದಿಯಲ್ಲಿ ಸ್ನಾನಮಾಡಿ ಕ್ಷೇತ್ರುದರ್ಶನದಿಂದ ಪುನೀತರಾಗುತ್ತೇವೆಂದು ಭಾವಿಸಿಕೊಂಡು, ಕಾರ್ಯಕ್ರಮದಲ್ಲಿ ಒಮ್ಮೆ ಇಣುಕಿ ನೋಡಿ ಹೋದರೆ ಸಾಲದು. ಪ್ರತಿಯೊಂದು ಸಮಾವೇಶದಲ್ಲಿಯೂ ಲಕ್ಷ್ಯವಿಟ್ಟು ಭಾಗವಹಿಸಿ, ಉದಾತ್ತ ಸಂಸ್ಕಾರವನ್ನು ಮೈಗೂಡಿಸಿಕೊಳ್ಳಬೇಕು. ಶರಣ ಮೇಳದ ಮುಖ್ಯ ಧಾರ್ಮಿಕ ವಿಧಿಗಳು ಸಮುದಾಯ ಪ್ರಾರ್ಥನೆ, ಸಾಮೂಹಿಕ ಇಷ್ಟಲಿಂಗ ಪೂಜೆ, ಇವೆರಡರಲ್ಲೂ ತಪ್ಪದೆ ಭಾಗವಹಿಸಬೇಕು. ಮೂರನೆಯ ದಿವಸದ ರಾಷ್ಟ್ರೀಯ ಬಸವ ದಳದ ಸಮಾವೇಶವೂ ಅಷ್ಟೇ ಮಹತ್ವಪೂರ್ಣ. ಅದರಲ್ಲಿ ಬಹಳ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು. ಬಸವ ಪಥದಲ್ಲಿರುವ, ಅದಕ್ಕಾಗಿ ದುಡಿದ, ಧರ್ಮ-ರಾಷ್ಟ್ರಗಳಿಗೆ ಸೇವೆ ಸಲ್ಲಿಸಿರುವ ವಿವಿಧ ರಾಜ್ಯಗಳ ಮಹನೀಯರಿಗೆ ಸತ್ಕಾರ ಸಮಾರಂಭ ಇರುವುದು. ಇವೆಲ್ಲವುಗಳಲ್ಲಿ ಶರಣ ಬಂಧುಗಳು ಆಸಕ್ತಿಯಿಂದ ಪಾಲ್ಗೊಳ್ಳಬೇಕು. ಕೇವಲ ಪ್ರವಾಸದ ದೃಷ್ಟಿಕೋನವನ್ನಾಗಲೀ, ಕ್ಷೇತ್ರುದರ್ಶನದ ಆಸಕ್ತಿಯನ್ನಾಗಲೀ ಇರಿಸಿಕೊಳ್ಳದೆ ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು.

ಪ್ರತಿಯೊಬ್ಬರಿಗೂ "ಇದು ನನ್ನ ಕಾರ್ಯಕ್ರಮ. ನನ್ನ ಸಹಭಾಗಿತ್ವ ಮತ್ತು ಸೇವೆ ಅತ್ಯಂತ ಅಗತ್ಯ ಮತ್ತು ಕರ್ತವ್ಯ." ಎಂಬ ಮನೋಭಾವ, "ಇಲ್ಲಿ ಬಂದು ಶರಣ ಧರ್ಮದ ಸಂಸ್ಕಾರವನ್ನು ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬಸವ-ಕಿರಣಗಳಾಗಿ ರೂಪುಗೊಂಡು ಹೋಗುವುದು ಗುರು ಬಸವಣ್ಣನವರಿಗೆ ನಾವು ತೀರಿಸಬಹುದಾದ ಅಲ್ಪ ಋಣ" ಎಂಬ ಭಾವವು ನಿಮ್ಮಗಳಲ್ಲಿ ಬೆಳೆಯಬೇಕೆಂದು ಹಾರೈಸುವೆವು.

—ಮಾತಾಜಿ

ಕರ್ನಾಟಕ



ಕೂಡಲ ಸಂಗಮ-ಸ್ಥಳ ನಿರ್ದೇಶನ